ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

# ಶಿಕ್ಷಣಶಾಸ್ತ್ರ (52)

## ಪ್ರಥಮ ಪಿಯುಸಿ ಪರಿಷ್ಕೃತ ಪ್ರಶ್ನೆಕೋಠಿ

## 2024-25

### ಶಿಕ್ಷಣಶಾಸ್ತ್ರ (52) ಪ್ರಥಮ ಪಿಯುಸಿ ಪ್ರಶ್ನೆಕೋಠಿ ರಚನಾ ಸಮಿತಿ


**: ಸಂಯೋಜಕರು :**

ಡಾ|| ನಾಗರಾಜ ಬ. ಮರೆಣ್ಣವರ
ಶಿಕ್ಷಣಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು ವಡಗಾವಿ
ಬೆಳಗಾವಿ ಜಿಲ್ಲೆ (DD0219)

**: ಸದಸ್ಯರುಗಳು :**

ಶ್ರೀ ಕೊಟ್ರಪ್ಪ ಎಸ್.
ಶಿಕ್ಷಣಶಾಸ್ತ್ರ ಉಪನ್ಯಾಸಕರು
ಎಸ್.ಯು.ಜೆ.ಎಂ. ಪದವಿ ಪೂರ್ವ ಕಾಲೇಜು
ಹರಪನಹಳ್ಳಿ, ವಿಜಯನಗರ ಜಿಲ್ಲೆ (CC0203)

ಶ್ರೀಮತಿ ನಿರುಪಮ ವಿ. ನಾಯಕ
ಶಿಕ್ಷಣಶಾಸ್ತ್ರ ಉಪನ್ಯಾಸಕರು
ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜು
ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ (QQ0021)

ಶ್ರೀ ಗುರುರಾಜ್ ಹಂಚಿನಾಳ
ಶಿಕ್ಷಣಶಾಸ್ತ್ರ ಉಪನ್ಯಾಸಕರು
ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು
ದಾವಣಗೆರೆ, ದಾವಣಗೆರೆ ಜಿಲ್ಲೆ(GD0015)

ಶ್ರೀ ರಾಜಪ್ಪ ಎಂ.
ಶಿಕ್ಷಣಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು ಹೊಸಕೆರೆ
ಜಗಳೂರು ತಾ. ದಾವಣಗೆರೆ ಜಿಲ್ಲೆ (GD0294)



ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

## : ವಿಷಯ ಪರಿವಿಡಿ :


| ಘಟಕಗಳ ಸಂಖ್ಯೆ | ಘಟಕಗಳ ಹೆಸರು | ಪುಟಗಳ ಸಂಖ್ಯೆ |
|---|---|---|
| 1 | ಶಿಕ್ಷಣದ ಪರಿಕಲ್ಪನೆ | 1 – 3 |
| 2 | ವ್ಯಕ್ತಿಯ ವಿಕಾಸ | 4 – 5 |
| 3 | ಕಲಿಕೆ | 6 – 8 |
| 4 | ಸಮೂಹ ಗತಿಶೀಲತೆ | 9 – 10 |
| 5 | ಶಿಕ್ಷಣ ಮತ್ತು ಸಮಾಜ | 11 – 12 |
| 6 | ಶೈಕ್ಷಣಿಕ ಅರ್ಥಶಾಸ್ತ್ರ | 13 – 14 |
| 7 | ಮಾರ್ಗದರ್ಶನ ಮತ್ತು ಸಮಾಲೋಚನೆ | 14 – 16 |
| 8 | ಆರೋಗ್ಯ ಶಿಕ್ಷಣ | 16 – 19 |
| 9 | ಮೌಲ್ಯಾಧಾರಿತ ಶಿಕ್ಷಣ | 19 – 21 |
| 10 | ಪರಿಸರ ಶಿಕ್ಷಣ | 21 - 23 |

# ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

## ಪ್ರಥಮ ಪಿಯುಸಿ : ಶಿಕ್ಷಣಶಾಸ್ತ್ರ(52) ವಿಷಯದ ಪ್ರಶ್ನೆಕೋಠಿ : 2024-25

**ಸಾಮಾನ್ಯ ಸೂಚನೆಗಳು :**

1. ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆ ಸ್ವರೂಪವು A, B, C, D, ಮತ್ತು E ಎಂಬ ವಿಭಾಗಗಳನ್ನು ಒಳಗೊಂಡಿರುತ್ತದೆ.
2. A ವಿಭಾಗದಲ್ಲಿ 1 ಅಂಕದ MCQ, FIB, MF, 1 ಪದದ/ವಾಕ್ಯದ ಪ್ರಶ್ನೆಗಳನ್ನು ಕೊಟ್ಟಿದ್ದು ಪ್ರಶ್ನೆಗಳ ಸ್ವರೂಪವನ್ನು ಬದಲಿಸಬಹುದು.
3. HOTS ಗೆ ಸಂಬಂಧಿಸಿದ ಪ್ರಶ್ನೆಗಳ ಸ್ವರೂಪವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಉತ್ತರಿಸಿ.
4. ಪ್ರಶ್ನೆಪತ್ರಿಕೆ ತಯಾರಕರು ಪ್ರಶ್ನೆಕೋಠಿಯಿಂದ ಪ್ರಶ್ನೆಗಳನ್ನು ಆಯ್ಕೆಮಾಡಿಕೊಳ್ಳಲು ಆಧ್ಯತೆ ಕೊಡುವುದು.

## ಘಟಕ_1 : ಶಿಕ್ಷಣದ ಪರಿಕಲ್ಪನೆ

**I. ಬಹು ಆಯ್ಕೆ ಪ್ರಶ್ನೆಗಳು (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)**

1. 'EDUCARE' ಶಬ್ದದ ಅರ್ಥ
   a) ಮೇಲಕ್ಕೆ ತಾ b) ಹೊರ ತರು c) ತರಬೇತಿಗೊಳಿಸು d) ಆನಂದಿಸು
2. 'EDUCERE' ಶಬ್ದದ ಅರ್ಥ
   a) ಅಭ್ಯಾಸ ಮಾಡು b) ಆಲೋಚಿಸು c) ಹೊರಗೆ ತಾ d) ಮೇಲಕ್ಕೆ ತಾ
3. ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸುವ ನೇರವಾದ ಮತ್ತು ಪ್ರಜ್ಞಾಪೂರ್ವಕವಾಗಿ ಒದಗಿಸುವ ಶಿಕ್ಷಣದ ಮಾರ್ಗ
   a) ಕುಟುಂಬ b) ಶಾಲೆ c) ದೂರದರ್ಶನ d) ಪತ್ರಿಕೆಗಳು
4. ವಿಶಾಲಾರ್ಥದಲ್ಲಿ ಶಿಕ್ಷಣವನ್ನು ಒದಗಿಸುವ ಮಾಧ್ಯಮ_
   a) ಸಮಾಜ b) ಕುಟುಂಬ c) ಸಮೂಹ ಮಾಧ್ಯಮ d) ಮೇಲಿನ ಎಲ್ಲವೂ
5. 'ಶಿಕ್ಷಣದ ದ್ವಿಮುಖ ಪ್ರಕ್ರಿಯೆ'ಯು ಈ ಎರಡು ಅಂಶಗಳ ನಡುವಿನ ಕ್ರಿಯೆ-ಪ್ರತಿಕ್ರಿಯೆಯಾಗಿದೆ.
   a) ಶಿಕ್ಷಕ - ಸಮಾಜ b) ಶಿಕ್ಷಕ - ವಿದ್ಯಾರ್ಥಿ c) ಶಿಕ್ಷಕ - ಪಠ್ಯಕ್ರಮ d) ಶಿಕ್ಷಕ - ಕುಟುಂಬ
6. 'ಶಿಕ್ಷಣದ ತ್ರಿಮುಖ ಪ್ರಕ್ರಿಯೆ'ಯು ಈ ಮೂರು ಅಂಶಗಳ ನಡುವಿನ ಕ್ರಿಯೆ-ಪ್ರತಿಕ್ರಿಯೆಯಾಗಿದೆ.
   a) ಕುಟುಂಬ–ವಿದ್ಯಾರ್ಥಿ-ಪ್ರಾಂಶುಪಾಲರು c) ಶಾಲೆ–ಸಮಾಜ-ಕುಟುಂಬ
   b) ಶಿಕ್ಷಕ-ವಿದ್ಯಾರ್ಥಿ-ಕುಟುಂಬ d) ಶಿಕ್ಷಕ - ವಿದ್ಯಾರ್ಥಿ - ಪಠ್ಯಕ್ರಮ
7. "ಮಗು ಮತ್ತು ವ್ಯಕ್ತಿಯ ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಅಂಶಗಳಲ್ಲಿರುವ ಅತ್ಯುತ್ತಮವಾದುದನ್ನು ಹೊರತರುವಂತೆ ಮಾಡುವುದೇ ಶಿಕ್ಷಣ" ಈ ವ್ಯಾಖ್ಯಾನ ನೀಡಿದವರು -
   a) ಮಹಾತ್ಮ ಗಾಂಧಿ b) ರೂಸೋ c) ಜಾನ್ ಡ್ಯೂಯಿ d) ಡಾ|| ರಾಧಾಕೃಷ್ಣನ್
8. ಈ ಕೆಳಗಿನ ಶಿಕ್ಷಣದ ಚಿಂತಕರಲ್ಲಿ ಭಾರತದ ರಾಷ್ಟ್ರಪತಿ ಸ್ಥಾನಕ್ಕೇರಿದವರನ್ನು ಗುರುತಿಸಿ.
   a) ಮಹಾತ್ಮ ಗಾಂಧಿ b) ಡಾ|| ರಾಧಾಕೃಷ್ಣನ್ c) ಸ್ವಾಮಿ ವಿವೇಕಾನಂದ d) ಜೆ. ಕೃಷ್ಣಮೂರ್ತಿ
9. "ಮಗುವಿನ ಆಂತರಿಕತೆಯನ್ನು ಬಾಹ್ಯತೆಗೆ ತರುವ ಪ್ರಕ್ರಿಯೆಯೇ ಶಿಕ್ಷಣ". ಇದನ್ನು ಹೇಳಿದವರು -
   a) ಜೆಂಟೈಲ್ b) ಫ್ರೊಬೆಲ್ c) ಗ್ಯಾರೆಟ್ d) ವುಡ್‌ವರ್ಥ್
10. "ವ್ಯಕ್ತಿಯ ಅಂತಃಶಕ್ತಿಗಳ ಸಹಜ, ಸಮರಸ ಮತ್ತು ಪ್ರಗತಿಪೂರ್ಣ ವಿಕಾಸವೇ ಶಿಕ್ಷಣ" ಎಂದು ವ್ಯಾಖ್ಯಾನಿಸಿದವರು.
    a) ಪೆಸ್ಟಾಲಜಿ b) ಫ್ರೊಬೆಲ್ c) ಕೃಷ್ಣಮೂರ್ತಿ d) ರಾಧಾಕೃಷ್ಣನ್
11. 'ಮಕ್ಕಳ ಮನೆ' ಎಂಬ ಶಾಲೆಯನ್ನು ತೆರೆದವರು.
    a) ಗಾಂಧೀಜಿ b) ರೂಸೋ c) ಪೆಸ್ಟಾಲಜಿ d) ಮಾಂಟೆಸರಿ
12. Psyche ಮತ್ತು Logus ಎಂಬ ಲ್ಯಾಟಿನ್ ಮೂಲಗಳಿಂದ ಉಗಮ ಹೊಂದಿರುವ ಪದ
    a) Psychology b) Philosophy c) Sociology d) Guidance

13. “ಸತ್ಯಾಂಶದ ಸ್ವರೂಪ ಕುರಿತಂತೆ ತಾರ್ಕಿಕ ಅನ್ವೇಷಣೆ ಮಾಡುವ ಶಾಸ್ತ್ರವೇ ತತ್ವಶಾಸ್ತ್ರ” ಎಂದು ವ್ಯಾಖ್ಯಾನಿಸಿದವರು.
a) ರೇಮಂಟ್ b) ಫ್ರೊಬೆಲ್ c) ಡಾ|| ರಾಧಾಕೃಷ್ಣನ್ d) ಮಾಂಟೆಸರಿ

14. “ವರ್ತನೆಯ ಧನಾತ್ಮಕ ವಿಜ್ಞಾನವೇ ಮನೋವಜ್ಞಾನ” ಎಂದು ವ್ಯಾಖ್ಯಾನ ಮಾಡಿದವರು.
a) ವ್ಯಾಟ್ಸನ್ b) ಹ್ಯಾರಿ ಜಾನ್ಸನ್ c) ಮೋರಿಸ್ d) ನಿಕೋಲಾಸ್

15. ಇವುಗಳಲ್ಲಿ ’ಶಿಕ್ಷಣದ ವೈಯಕ್ತಿಕ ಗುರಿ’ಯನ್ನು ಗುರುತಿಸಿ.
a) ಆರೋಗ್ಯದ ಗುರಿ b) ಜ್ಞಾನದ ಗುರಿ c) ಚಾರಿತ್ರ್ಯ ಗುರಿ d) ಮೇಲಿನ ಎಲ್ಲವೂ

16. ಇವುಗಳಲ್ಲಿ ’ಶಿಕ್ಷಣದ ಸಾಮಾಜಿಕ ಗುರಿ’ಯನ್ನು ಗುರುತಿಸಿ.
a) ಪೌರತ್ವದ ಗುರಿ b) ಸಂಸ್ಕೃತಿಯ ಗುರಿ c) ರಾಷ್ಟ್ರೈಕ್ಯತೆ ಗುರಿ d) ಮೇಲ್ಕಂಡ ಎಲ್ಲವೂ

17. “ಸದೃಢ ದೇಹದಲ್ಲಿ ಸದೃಢ ಮನಸ್ಸಿನ ನಿರ್ಮಾಣವೇ ಶಿಕ್ಷಣ” ಎಂದು ಉಲ್ಲೇಖಿಸಿದವರಾರು?
a) ಥಾರ್ನ್‌ಡೈಕ್ b) ಅರಿಸ್ಟಾಟಲ್ c) ರೈಬರ್ನ್ d) ಗ್ಯಾರೇಟ್

18. “ನಿಜವಾದ ಶಿಕ್ಷಣ ನಿರುದ್ಯೋಗದ ವಿರುದ್ಧ ವಿಮೆಯಂತಿರಬೇಕು” ಎಂದು ಹೇಳಿದವರು
a) ಅರಿಸ್ಟಾಟಲ್ b) ರೂಸೋ c) ಗಾಂಧೀಜಿ d) ಸ್ವಾಮಿ ವಿವೇಕಾನಂದ

19. ರಾಷ್ಟ್ರೈಕ್ಯತೆಯ ಗುರಿಯನ್ನು ಸಾಧಿಸಲು ರೂಪಿಸಬಹುದಾದ ಶೈಕ್ಷಣಿಕ ಕಾರ್ಯಯೋಜನೆ
a) ರಾಷ್ಟ್ರಗೀತೆಗೆ ಹಾಗೂ ರಾಷ್ಟ್ರಧ್ವಜಕ್ಕೆ ವಿಶೇಷ ಮಹತ್ವ ನೀಡುವುದು.
b) ರಾಷ್ಟ್ರೀಯ ದಿನಾಚರಣೆಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುವುದು.
c) ರಾಷ್ಟ್ರಕ್ಕಾಗಿ ಜೀವತ್ಯಾಗ ಮಾಡಿದವರ ಜನ್ಮದಿನಗಳನ್ನು ಆಚರಣೆ ಮಾಡುವುದು.
d) ಈ ಮೇಲ್ಕಂಡ ಎಲ್ಲಾ ಕಾರ್ಯಗಳನ್ನು ಹಮ್ಮಿಕೊಳ್ಳುವುದು.

20. ’ರಾಷ್ಟ್ರಗಳ ಮಧ್ಯ ಯುದ್ಧಭೀತಿಯನ್ನು ಬಿಟ್ಟು ಇಡೀ ಮನುಕುಲವನ್ನು ಪ್ರೀತಿಸು’ ಎಂಬ ಅರ್ಥ ಕೊಡುವ ಶಿಕ್ಷಣದ ಗುರಿ
a) ಪ್ರಾಂತೀಯತೆ b) ವಿಶ್ವ ಭ್ರಾತೃತ್ವ c) ಸಂಸ್ಕೃತಿ ರಕ್ಷಣೆ d) ಸಾಮಾಜಿಕ ಒಡಂಬಡಿಕೆ

## II. ಹೊಂದಿಸಿ ಬರೆಯಿರಿ.

| | A | B |
|---|---|---|
| 1) | Educare | - ಮೇಲಕ್ಕೆ ತಾ |
| 2) | Educere | - ಹೊರಗೆ ತಾ |
| 3) | ಸಮಾಜಶಾಸ್ತ್ರದ ಪಿತಾಮಹ | - ಆಗಸ್ಟ್ ಕೋಮ್ಟ್ |
| 4) | ಶಿಶುಕೇಂದ್ರಿತ ಶಿಕ್ಷಣ ಪದ್ಧತಿ | - ರೂಸೋ |
| 5) | ’ಕಿಂಡರ್ ಗಾರ್ಟನ್’ ಪದ್ಧತಿ ಜನಕ | - ಫ್ರೊಬೆಲ್ |
| 6) | ಪ್ರಬೋಧಕ ಉಪಕರಣಗಳು | - ಮಾಂಟೆಸ್ಸರಿ |
| 7) | Philosophy ನಿಷ್ಪತ್ತಿ | - Philo ಮತ್ತು Sophia |
| 8) | ಮನಶಾಸ್ತ್ರದ ಅರ್ಥ | - ವರ್ತನೆಯ ಅಧ್ಯಯನ |
| 9) | ಎಮಿಲಿ | - ರೂಸೋರವರ ಶೈಕ್ಷಣಿಕ ಗ್ರಂಥ |
| 10) | ಚಾರಿತ್ರ್ಯ | - ನೈತಿಕ ಗುಣ |
| 11) | ರಾಷ್ಟ್ರೈಕ್ಯತೆ ಎಂದರೆ | - ವಿವಿಧತೆಯಲ್ಲಿ ಏಕತೆಯ ಭಾವನೆ |
| 12) | ವಸುದೈವ ಕುಟುಂಬಕಂ | - ಅಂತರಾಷ್ಟ್ರೀಯ ಸಹೋದರತ್ವ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

**(Educatum, ಸ್ವಾಮಿ ವಿವೇಕಾನಂದ, ಜೆ. ಕೃಷ್ಣಮೂರ್ತಿ, ಲಾಡ್ಜ್, Philosophy, Psychology, ಶೈಕ್ಷಣಿಕ ಸಮಾಜಶಾಸ್ತ್ರ, ಸಾಕ್ರೆಟಿಸ್, ಡಾ. ರಾಧಾಕೃಷ್ಣನ್, ಸಂಸ್ಕೃತಿ)**

1) ’ತರಬೇತಿಗೊಳಿಸು’ ಎಂಬ ಅರ್ಥವನ್ನು ಕೊಡುವ ಶಿಕ್ಷಣದ ವ್ಯುತ್ಪತ್ತಿ______
2) “ಮಾನವನಲ್ಲಿ ಮೊದಲೇ ಅಂತರ್ಗತವಾಗಿರುವ ದೈವಿಕ ಪರಿಪೂರ್ಣತೆಯನ್ನು ಪ್ರಕಟಪಡಿಸುವುದೇ ಶಿಕ್ಷಣ”. ಇದನ್ನು ಹೇಳಿದವರು__
3) ‘Education as service’ ಎಂಬ ಶೈಕ್ಷಣಿಕ ಗ್ರಂಥವನ್ನು ಬರೆದವರು_____

4) “ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ” ಎಂದು ಹೇಳಿದವರು______

5) ’Love of wisdom ಅರ್ಥಾತ್ ವಿವೇಕದ ಬಗ್ಗೆ ಇರುವ ಪ್ರೀತಿ’ ಎಂಬ ಅರ್ಥಕೊಡುವ ಶಬ್ದ_____

6) ಲ್ಯಾಟಿನ್ ಭಾಷೆಯ ’Psyche ಮತ್ತು Logos ಎಂದರೆ ಎಂಬ ಅರ್ಥಗಳನ್ನು ಕೊಡುವ ಶಬ್ದ______

7) “ಶಿಕ್ಷಣ ಮತ್ತು ಸಮಾಜದ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವ ಶಾಸ್ತ್ರ” ಎಂದರೆ_____

8) “ಜ್ಞಾನವೇ ಶಕ್ತಿ” ಎಂದು ಹೇಳಿದವರು______

9) “ರಾಷ್ಟ್ರೈಕ್ಯತೆ ಎಂಬುದು ಇಟ್ಟಿಗೆ ಗಾರೆಯಿಂದ ಕಟ್ಟುವಂಥದಲ್ಲ ಮತ್ತು ಸುತ್ತಿಗೆ ಹಾಗೂ ಉಳಿಯಿಂದ ಕಟ್ಟಲಾಗದು. ಅದು ಶಿಕ್ಷಣದ ಮೂಲಕ ಜನರ ಮನದಲ್ಲಿ ನಿಧಾನವಾಗಿ ಮೂಡುವಂಥದ್ದು” ಎಂಬ ಹೇಳಿಕೆಯನ್ನು ನೀಡಿದ ಶಿಕ್ಷಣತಜ್ಞ_____

10) ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ ಹಾಗೂ ಜೀವನ ಮೌಲ್ಯಗಳ ಮತ್ತು ಆದರ್ಶಗಳ ಸಂಗ್ರಹವೇ _____

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಶಿಕ್ಷಣದ ಸಂಕುಚಿತ ಅರ್ಥವೇನು?
2) ತತ್ವಶಾಸ್ತ್ರ ಎಂದರೇನು?
3) ಮನಶಾಸ್ತ್ರವನ್ನು ವ್ಯಾಖ್ಯಾನಿಸಿ.
4) ಸಮಾಜಶಾಸ್ತ್ರದ ಅರ್ಥವೇನು?
5) ಜೆ. ಕೃಷ್ಣಮೂರ್ತಿಯವರ ಪ್ರಕಾರ ಶಿಕ್ಷಣ ಎಂದರೇನು?
6) ಮಾಂಟೆಸ್ಸರಿಯವರ ದೃಷ್ಟಿಯಲ್ಲಿ ಶಿಕ್ಷಣ ಎಂದರೇನು?
7) ಜ್ಞಾನದ ಅರ್ಥವನ್ನು ತಿಳಿಸಿ.
8) ಪ್ರಜಾಸತ್ತಾತ್ಮಕ ಪೌರ ಎಂದರೆ ಯಾರು?
9) ರಾಷ್ಟ್ರೈಕ್ಯತೆ ಎಂದರೇನು?
10) ಸಂಸ್ಕೃತಿಯ ಅರ್ಥವೇನು?
11) ವಸುದೈವ ಕುಟುಂಬಕಂ ಎಂದರೇನು?

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಶಿಕ್ಷಣದ ಸಂಕುಚಿತ ಅರ್ಥವನ್ನು ತಿಳಿಸಿ.
2) ಶಿಕ್ಷಣದ ವಿಶಾಲಾರ್ಥ ಎಂದರೇನು?
3) ‘ಶಿಕ್ಷಣ ಒಂದು ದ್ವಿಮುಖ ಪ್ರಕ್ರಿಯೆ’ ಎಂಬುದನ್ನು ಸ್ಪಷ್ಟೀಕರಿಸಿ.
4) ‘ಶಿಕ್ಷಣ ಒಂದು ತ್ರಿಮುಖ ಪ್ರಕ್ರಿಯೆ’ ಎಂಬುದನ್ನು ಸ್ಪಷ್ಟೀಕರಿಸಿ.
5) ಭಾರತೀಯ ಶಿಕ್ಷಣ ಚಿಂತಕರಲ್ಲಿ ಇಬ್ಬರನ್ನು ಹೆಸರಿಸಿ.
6) ಪಾಶ್ಚಿಮಾತ್ಯ ಶಿಕ್ಷಣತಜ್ಞರಲ್ಲಿ ಇಬ್ಬರನ್ನು ಹೆಸರಿಸಿ.
7) ಡಾ|| ರಾಧಾಕೃಷ್ಣನ್‌ರವರ ದೃಷ್ಟಿಯಲ್ಲಿ ಶಿಕ್ಷಣ ಎಂದರೇನು?
8) ರೂಸೋರವರು ಬರೆದ ಎರಡು ಪ್ರಮುಖ ಗ್ರಂಥಗಳನ್ನು ಹೆಸರಿಸಿ.
9) ಶಿಕ್ಷಣದ ಯಾವುದೇ ಎರಡು ಆಧಾರಗಳನ್ನು ತಿಳಿಸಿ.
10) ಶಿಕ್ಷಣದ ಯಾವುದೇ ಎರಡು ವೈಯಕ್ತಿಕ ಗುರಿಗಳನ್ನು ತಿಳಿಸಿ.
11) ಶಿಕ್ಷಣದ ಯಾವುದೇ ಎರಡು ಸಾಮಾಜಿಕ ಗುರಿಗಳನ್ನು ಹೆಸರಿಸಿ.
12) ಪ್ರಜಾಸತ್ತಾತ್ಮಕ ಪೌರನ ಎರಡು ಗುಣಲಕ್ಷಣಗಳಾವುವು?

## VI. ಹತ್ತು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 35-40 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಶಿಕ್ಷಣದ ಅರ್ಥ ಕುರಿತಂತೆ ಭಾರತೀಯ ಮತ್ತು ಪಾಶ್ಚಿಮಾತ್ಯ ಶಿಕ್ಷಣ ತಜ್ಞರ ಹೇಳಿಕೆಗಳನ್ನು ಸಂಗ್ರಹಿಸಿ ಬರೆಯಿರಿ.
2) ’ತತ್ವಶಾಸ್ತ್ರ ಮತ್ತು ಮನಶಾಸ್ತ್ರವು ಶಿಕ್ಷಣಕ್ಕೆ ನೆಲೆಯಾಗಿವೆ’. ಸಮರ್ಥಿಸಿ.
3) ಶಿಕ್ಷಣದ ವೈಯಕ್ತಿಕ ಗುರಿಗಳಾವುವು? ಯಾವುದಾದರೂ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ.
4) ಶಿಕ್ಷಣದ ಸಾಮಾಜಿಕ ಗುರಿಗಳಾವುವು? ಯಾವುದಾದರೂ ಎರಡನ್ನು ಕುರಿತು ವಿವರಿಸಿ.

# ಘಟಕ_2 : ವ್ಯಕ್ತಿಯ ವಿಕಾಸ

**I. ಬಹು ಆಯ್ಕೆ ಪ್ರಶ್ನೆಗಳು (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)**

1. ವ್ಯಕ್ತಿಯಲ್ಲಿ ಉಂಟಾಗುವ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಬದಲಾವಣೆಯನ್ನು ಸೂಚಿಸುವ ಪದ-
   a) ಬೆಳವಣಿಗೆ b) ವಿಕಾಸ c) ಅನುವಂಶೀಯತೆ d) ಪರಿಸರ
2. ಇವುಗಳಲ್ಲಿ ವಿಕಾಸದ ತತ್ವವನ್ನು ಗುರುತಿಸಿ.
   a) ವಿಕಾಸವು ನಿರಂತರ ಪ್ರಕ್ರಿಯೆ. c) ವಿಕಾಸವು ಕ್ರಮಬದ್ಧ ವಿನ್ಯಾಸ ಅನುಸರಿಸುತ್ತದೆ.
   b) ವಿಕಾಸವು ವೈಯಕ್ತಿಕ ಪ್ರಕ್ರಿಯೆ d) ಈ ಮೇಲ್ಕಂಡ ಎಲ್ಲವೂ
3. ಉತ್ತರ ಬಾಲ್ಯಾವಸ್ಥೆಯ ಅವಧಿ
   a) 2 ರಿಂದ 6 ವರ್ಷ b) 13 ರಿಂದ 18 ವರ್ಷ c) 6 ರಿಂದ 12 ವರ್ಷ d) 18 ರಿಂದ 25 ವರ್ಷ
4. ತಾರುಣ್ಯಾವಸ್ಥೆಯ ಅವಧಿ
   a) 2 ರಿಂದ 6 ವರ್ಷ b) 21 ರಿಂದ 30 ವರ್ಷ c) 6 ರಿಂದ 12 ವರ್ಷ d) 13 ರಿಂದ 18 ವರ್ಷ
5. ಪೂರ್ವ ಬಾಲ್ಯಾವಸ್ಥೆ ಮಕ್ಕಳ ವಿಕಾಸಾತ್ಮಕ ಲಕ್ಷಣ
   a) ಕಂಠಪಾಠದ ಮೂಲಕ ಕಲಿಯುತ್ತಾರೆ. c) ಬಾಲಕ ಮತ್ತು ಬಾಲಕಿಯರು ಒಟ್ಟಿಗೆ ಆಟವಾಡುತ್ತಾರೆ.
   b) ಪರಿಸರದ ಬಗ್ಗೆ ಕುತೂಹಲ ಹೊಂದಿರುತ್ತಾರೆ. d) ಈ ಮೇಲಿನ ಎಲ್ಲವೂ
6. 'ಕೂಟಯುಗ' (Gang Period) ಎಂದು ಕರೆಯಲ್ಪಡುವ ವಿಕಾಸದ ಹಂತವೆಂದರೆ,
   a) ಶೈಶವಾವಸ್ಥೆ b) ತಾರುಣ್ಯಾವಸ್ಥೆ c) ಉತ್ತರ ಬಾಲ್ಯಾವಸ್ಥೆ d) ಪೂರ್ವ ಬಾಲ್ಯಾವಸ್ಥೆ
7. Adolescence ಎಂಬ ಶಬ್ದದ ಲ್ಯಾಟಿನ್ ಭಾಷೆಯ ಮೂಲಪದ
   a) Adulteration b) Admin c) Adolescere d) Adult
8. ನಿರ್ನಾಳ ಗ್ರಂಥಿಗಳು ಸ್ರವಿಸುವ ಹಾರ್ಮೋನ್‌ಗಳಿಂದಾಗಿ ದೈಹಿಕವಾಗಿ ತೀವ್ರ ಬದಲಾವಣೆ ಉಂಟಾಗುವ ವಿಕಾಸದ ಹಂತ
   a) ಶೈಶವಾಸ್ಥೆ b) ಹಸುಳೆತನ c) ಪೂರ್ವಬಾಲ್ಯ d) ತಾರುಣ್ಯಾವಸ್ಥೆ
9. ಅನುವಂಶಿಯತೆಯ ನೈಜ ನಿರ್ಧಾರಕಗಳು
   a) ವಂಶವಾಹಿನಿಗಳು b) ಜೀವಕೋಶಗಳು c) ಶಾರೀರಿಕ ಲಕ್ಷಣಗಳು d) ಬೌದ್ಧಿಕ ಲಕ್ಷಣಗಳು
10. ಒಂದು ಮಗು ತನ್ನ 2 ರಿಂದ 6 ನೇ ವಯಸ್ಸಿನಲ್ಲಿ ಸರಾಸರಿ ಒಂದು ವರ್ಷಕ್ಕೆ 3 ಅಂಗುಲ ಎತ್ತರ, 2 ರಿಂದ $2\frac{1}{2}$ ಕಿಲೋ ತೂಕ ಹೆಚ್ಚಿಸಿಕೊಂಡರೆ, ಅದು ಮಗುವಿನ ಬೆಳವಣಿಗೆಯ ಯಾವ ಹಂತವಾಗಿದೆ?
    a) ಪೂರ್ವ ಬಾಲ್ಯಾವಸ್ಥೆ b) ಉತ್ತರ ಬಾಲ್ಯಾವಸ್ಥೆ c) ಶೈಶವಾವಸ್ಥೆ d) ತಾರುಣ್ಯಾವಸ್ಥೆ
11. ಅನುವಂಶಿಯತೆ ತತ್ವಗಳಿಗೆ ಸಂಬಂಧಿಸಿದಂತೆ <u>ತಪ್ಪಾಗಿರುವುದನ್ನು</u> ಗುರುತಿಸಿ.
    e) ಸಾಮ್ಯತೆಯ ತತ್ವ f) ಭಿನ್ನತೆಯ ತತ್ವ g) ಸಮಾಶ್ರಯಣದ ತತ್ವ h) ನಿರಂತರತೆಯ ತತ್ವ

**II. ಹೊಂದಿಸಿ ಬರೆಯಿರಿ.**

| | A | B |
|---|---|---|
| 1) | ಬೆಳವಣಿಗೆ | - ಪರಿಮಾಣಾತ್ಮಕ ಬದಲಾವಣೆ |
| 2) | 2-6 ವರ್ಷಗಳ ಅವಧಿ | - ಪೂರ್ವ ಬಾಲ್ಯಾವಸ್ಥೆ |
| 3) | 6-12 ವರ್ಷಗಳ ಅವಧಿ | - ಉತ್ತರ ಬಾಲ್ಯಾವಸ್ಥೆ |
| 4) | ಕೂಟಯುಗ | - ಉತ್ತರ ಬಾಲ್ಯಾವಸ್ಥೆ |
| 5) | Adolescere | - ಪರಿಪಕ್ವತೆಯೆಡೆಗೆ ಸಾಗುವುದು |
| 6) | 13-18 ವರ್ಷಗಳ ಅವಧಿ | - ತಾರುಣ್ಯಾವಸ್ಥೆ |
| 7) | ಅನುವಂಶಿಯತೆಯ ನಿರ್ಧಾರಕಗಳು | - ವಂಶವಾಹಿನಿಗಳು |
| 8) | ಸಾಮ್ಯತೆಯ ತತ್ವ | - ಅನುವಂಶೀಯತೆ |
| 9) | XX ವರ್ಣತಂತುಗಳು | - ಹೆಣ್ಣಿನ ಲಿಂಗ ನಿರ್ಧಾರಕಗಳು |
| 10) | XY ವರ್ಣತಂತುಗಳು | - ಗಂಡಿನ ಲಿಂಗ ನಿರ್ಧಾರಕಗಳು |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಬೆಳವಣಿಗೆ, ಹಸುಳೆತನ, ತಾರುಣ್ಯಾವಸ್ಥೆ, ಅನುವಂಶಿಯತೆ, 46, ಪರಿಸರ)

1) ವ್ಯಕ್ತಿಯಲ್ಲಿ ದೈಹಿಕ ಸ್ವರೂಪದಲ್ಲಿ ಉಂಟಾಗುವ ಬದಲಾವಣೆ ಎಂದರೆ_____
2) ಎಲಿಜೆಬತ್ ಬಿ. ಹರ್ಲಾಕ್‌ರವರು ವಿಕಾಸದ 2ನೇ ವಾರದ ದಿಂದ 2 ವರ್ಷಗಳವರೆಗಿನ ಅವಧಿಯನ್ನು _____ಎಂದು ಕರೆದರು.
3) ಮಾನಸಿಕ ಒತ್ತಡ, ಸಂಕ್ಷೋಭೆ ಮತ್ತು ಪ್ರಯಾಸಗಳ ಕಾಲ ಎಂದು ಕರೆಯಲ್ಪಡುವ ವಿಕಾಸದ ಹಂತ_____
4) "ವ್ಯಕ್ತಿಯ ಸಹಜ ಗುಣಧರ್ಮಗಳ ಒಟ್ಟು ಮೊತ್ತ" ವನ್ನು ______ ಎನ್ನುವರು.
5) ಮಾನವರಲ್ಲಿ ಅನುವಂಶಿಕವಾಗಿ ಹರಿದುಬರುವ ವರ್ಣತಂತುಗಳ ಒಟ್ಟು ಸಂಖ್ಯೆ______
6) ವ್ಯಕ್ತಿಯ ಜೀವನದ ಪ್ರಾರಂಭದಿಂದ ಅವನ ಮೇಲೆ ಪ್ರಭಾವ ಬೀರುವ ಬಾಹ್ಯ ಅಂಶಗಳನ್ನು______ಎನ್ನುವರು.

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಬೆಳವಣಿಗೆ ಎಂದರೇನು?
2) ವಿಕಾಸದ ಅರ್ಥವೇನು?
3) ಶೈಶವಾವಸ್ಥೆಯ ಅವಧಿಯನ್ನು ತಿಳಿಸಿ.
4) ತಾರುಣ್ಯಾವಸ್ಥೆಯ ಅರ್ಥವೇನು?
5) ಅನುವಂಶೀಯತೆ ಪದವನ್ನು ವ್ಯಾಖ್ಯಾನಿಸಿ.
6) ಪರಿಸರ ಎಂದರೇನು?

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಬೆಳವಣಿಗೆ ಮತ್ತು ವಿಕಾಸದ ಯಾವುದೇ ಎರಡು ತತ್ವಗಳನ್ನು ತಿಳಿಸಿ.
2) ಪೂರ್ವ ಬಾಲ್ಯಾವಸ್ಥೆಯ ಮಕ್ಕಳ ದೈಹಿಕ ವಿಕಾಸದ ಎರಡು ಲಕ್ಷಣಗಳನ್ನು ಬರೆಯಿರಿ.
3) ಪೂರ್ವ ಬಾಲ್ಯಾವಸ್ಥೆಯ ಮಕ್ಕಳ ಬೌದ್ಧಿಕ ವಿಕಾಸದ ಎರಡು ಲಕ್ಷಣಗಳನ್ನು ಬರೆಯಿರಿ.
4) ಉತ್ತರ ಬಾಲ್ಯಾವಸ್ಥೆಯ ಮಕ್ಕಳ ದೈಹಿಕ ವಿಕಾಸದ ಎರಡು ಲಕ್ಷಣಗಳನ್ನು ತಿಳಿಸಿ.
5) ಉತ್ತರ ಬಾಲ್ಯಾವಸ್ಥೆಯ ಮಕ್ಕಳ ಬೌದ್ಧಿಕ ವಿಕಾಸದ ಎರಡು ಲಕ್ಷಣಗಳಾವುವು?
6) ಉತ್ತರ ಬಾಲ್ಯಾವಸ್ಥೆಯ ಮಕ್ಕಳ ಸಾಮಾಜಿಕ ವಿಕಾಸದ ಎರಡು ಲಕ್ಷಣಗಳನ್ನು ತಿಳಿಸಿ.
7) ಉತ್ತರ ಬಾಲ್ಯಾವಸ್ಥೆಯ ಮಕ್ಕಳ ಸಂವೇಗಾತ್ಮಕ ವಿಕಾಸದ ಎರಡು ಲಕ್ಷಣಗಳಾವುವು?
8) ಹದಿಹರೆಯದ ಮಕ್ಕಳ ದೈಹಿಕ ವಿಕಾಸದ ಎರಡು ಲಕ್ಷಣಗಳನ್ನು ತಿಳಿಸಿ.
9) ಹದಿಹರೆಯದ ಮಕ್ಕಳ ಬೌದ್ಧಿಕ ವಿಕಾಸದ ಎರಡು ಲಕ್ಷಣಗಳನ್ನು ತಿಳಿಸಿ.
10) ತಾರುಣ್ಯಾವಸ್ಥೆಯ ಮಕ್ಕಳ ಸಾಮಾಜಿಕ ವಿಕಾಸದ ಎರಡು ಲಕ್ಷಣಗಳನ್ನು ಬರೆಯಿರಿ.
11) ತಾರುಣ್ಯಾವಸ್ಥೆಯ ಮಕ್ಕಳ ಸಂವೇಗಾತ್ಮಕ ವಿಕಾಸದ ಎರಡು ಲಕ್ಷಣಗಳನ್ನು ತಿಳಿಸಿ.
12) ಅನುವಂಶಿಯತೆಯ ಯಾವುದೇ ಎರಡು ತತ್ವಗಳನ್ನು ತಿಳಿಸಿ.

## VI. ಐದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಬೆಳವಣಿಗೆ ಮತ್ತು ವಿಕಾಸದ ನಡುವಿನ ವ್ಯತ್ಯಾಸಗಳನ್ನು ಕೋಷ್ಟಕದಲ್ಲಿ ಪಟ್ಟಿಮಾಡಿ.
2) ಎಲಿಜಬೆತ್ ಬಿ. ಹರ್ಲಾಕ್ ಸೂಚಿಸಿರುವ ವಿಕಾಸದ ಹಂತಗಳನ್ನು ಕೋಷ್ಟಕದಲ್ಲಿ ಪಟ್ಟಿ ಮಾಡಿ.
3) ಬೆಳವಣಿಗೆ ಮತ್ತು ವಿಕಾಸದ ತತ್ವಗಳನ್ನು ವಿವರಿಸಿ.
4) ಪೂರ್ವ ಬಾಲ್ಯಾವಸ್ಥೆಯ ಮಕ್ಕಳ ದೈಹಿಕ ಮತ್ತು ಬೌದ್ಧಿಕ ವಿಕಾಸದ ಲಕ್ಷಣಗಳನ್ನು ತಿಳಿಸಿ.
5) ಉತ್ತರ ಬಾಲ್ಯಾವಸ್ಥೆಯ ಮಕ್ಕಳ ದೈಹಿಕ ಮತ್ತು ಬೌದ್ಧಿಕ ವಿಕಾಸದ ಲಕ್ಷಣಗಳನ್ನು ತಿಳಿಸಿ.
6) ತಾರುಣ್ಯಾವಸ್ಥೆ ಮಕ್ಕಳ ದೈಹಿಕ ವಿಕಾಸ ಮತ್ತು ಬೌದ್ಧಿಕ ವಿಕಾಸವನ್ನು ವಿವರಿಸಿ.
7) ಹದಿಹರೆಯದ ಮಕ್ಕಳಲ್ಲಿ ಕಂಡು ಬರುವ ಭಾವೋತ್ಕರ್ಷಗಳಿಗೆ ಕಾರಣಗಳನ್ನು ತಿಳಿಸಿ.
8) ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
9) ಹದಿಹರೆಯದ ಮಕ್ಕಳು ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಿರಿ.
10) ಬೆಳವಣಿಗೆ ಮತ್ತು ವಿಕಾಸದಲ್ಲಿ ಪರಿಸರದ ಪಾತ್ರವನ್ನು ವಿವರಿಸಿ.

## ಘಟಕ_3 : ಕಲಿಕೆ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. "ಅನುಭವಗಳ ಮೂಲಕ ವರ್ತನೆಯಲ್ಲಿ ಉಂಟಾಗುವ ಬದಲಾವಣೆಯೇ ಕಲಿಕೆ" ಎಂಬ ವ್ಯಾಖ್ಯೆ ನೀಡಿದವರು.
   a) ಸ್ಕಿನ್ನರ್ b) ಗೇಟ್ಸ್ c) ಜೋನ್ಸ್ d) ಮೆರಿಲ್
2. "ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ಸಂಬಂಧವೇ ಕಲಿಕೆ" ಎಂಬ ವ್ಯಾಖ್ಯೆ ನೀಡಿದವರು.
   a) ಥಾರ್ನ್‌ಡೈಕ್ b) ರೈಬರ್ನ್ c) ವ್ಯಾಟ್ಸನ್ d) ಜಾನ್ಸನ್
3. ಸ್ಮಿತ್‌ರವರು ಸೂಚಿಸಿದಂತೆ ಇವುಗಳಲ್ಲಿ ಕಲಿಕೆಯ ಪ್ರಕ್ರಿಯೆಯ ಭಾಗವಾಗಿಲ್ಲ.
   a) ಪ್ರೇರಕ b) ಗುರಿ c) ಅಡಚಣೆ d) ವಿಕಾಸ
4. ಇವುಗಳಲ್ಲಿ ಕಲಿಕೆಯ ಲಕ್ಷಣವನ್ನು ಗುರುತಿಸಿ
   a) ಕ್ರಿಯಾಶೀಲ ಪ್ರಕ್ರಿಯೆ b) ಪರಿಸರದ ಉತ್ಪನ್ನ c) ಅನುಭವಗಳ ಸಂಘಟನೆ d) ಮೇಲಿನ ಎಲ್ಲವೂ
5. ಕಲಿಕೆಯ ವಿವಿಧ ಪ್ರಕಾರಗಳನ್ನು ಶ್ರೇಣಿಯ ಪಿರಮಿಡ್ ಆಕಾರದಲ್ಲಿ ರಚಿಸಿದವರು.
   a) ಟೇಲರ್ b) ಗ್ಯಾನೆ c) ಸ್ಕಾಟ್ d) ಜಾನ್ಸನ್
6. ಪಿರಮಿಡ್ ಆಕಾರದ ಕಲಿಕಾ ಶ್ರೇಣಿಯಲ್ಲಿ ಉನ್ನತ ಮಟ್ಟದ ಕಲಿಕೆ
   a) ಸಂಜ್ಞಾ ಕಲಿಕೆ b) ನಿಯಮ ಕಲಿಕೆ c) ಸಮಸ್ಯಾ ಪರಿಹಾರ d) ಪರಿಕಲ್ಪನೆ ಕಲಿಕೆ
7. ವಿಕಾಸಾತ್ಮಕ ಕಲಿಕಾ ಸಿದ್ಧಾಂತದ ಪ್ರತಿಪಾದಕ
   a) ಲೆವಿನ್ b) ಡೇವಿಸನ್ c) ಜೀನ್ ಪಿಯಾಜೆ d) ಆಡಂಸ್ಮಿತ್
8. ಪಿಯಾಜೆಯವರ ವಿಕಾಸಾತ್ಮಕ ಕಲಿಕಾ ಸಿದ್ಧಾಂತದ ಹಂತಗಳಲ್ಲಿ ತಪ್ಪಾಗಿರುವುದನ್ನು ಕಂಡುಹಿಡಿಯಿರಿ.
   a) ಸಂವೇದನಾಗತಿ ಹಂತ c) ಔಪಚಾರಿಕ ಕಾರ್ಯಗಳ ಹಂತ
   b) ಕಾರ್ಯಪೂರ್ವ ಹಂತ d) ಸಿದ್ಧತಾ ಹಂತ
9. ಅನ್ವೇಷಣಾ ಕಲಿಕಾ ಸಿದ್ಧಾಂತದ ಪ್ರತಿಪಾದಕರ ಹೆಸರನ್ನು ಗುರುತಿಸಿ.
   a) ಮಿಲ್ಟನ್ b) ಜೆ ಎಸ್ ಬ್ರೂನರ್ c) ಸ್ಮಿತ್ d) ಮಾರ್ಷಲ್
10. ಪ್ರಭುತ್ವ ಕಲಿಕಾ ಸಿದ್ಧಾಂತವನ್ನು ಪ್ರತಿಪಾದಿಸಿದವರು.
    a) ಗಿಲ್ಬರ್ಟ್ b) ಬಿ ಎಸ್ ಬ್ಲೂಮ್ c) ಬೋರಿಂಗ್ d) ಸೆರೋವೆಸ್ಕಿ
11. 'ಸಾಮರ್ಥ್ಯ ಆಧಾರಿತ ಪರೀಕ್ಷೆ' ಎಂಬ ಮೌಲ್ಯಮಾಪನ ತಂತ್ರವನ್ನು ಸೂಚಿಸಿದ ಕಲಿಕಾ ಸಿದ್ಧಾಂತ
    a) ಪ್ರಭುತ್ವ ಕಲಿಕೆ b) ಸಂರಚನಾ ಕಲಿಕೆ c) ವೀಕ್ಷಣಾ ಕಲಿಕೆ d) ಅನ್ವೇಷಣಾ ಕಲಿಕೆ
12. ಯಾವುದಾದರೂ ಒಂದು ವಿಷಯದ ಮೇಲೆ ನಮ್ಮಪ್ರಜ್ಞೆಯನ್ನು ಕೇಂದ್ರೀಕರಿಸುವುದಕ್ಕೆ____ಎನ್ನುತ್ತೇವೆ.
    a) ಉದ್ವೇಗ b) ಅವಧಾನ c) ಸ್ಮೃತಿ d) ಅಭಿಪ್ರೇರಣೆ
13. ಅವಳಿ (ಸಮರೂಪಿ) ಮಕ್ಕಳ ಮೇಲೆ ಪಕ್ವತೆಯ ಪ್ರಯೋಗ ಮಾಡಿದ ಮನೋವಿಜ್ಞಾನಿಯನ್ನು ಗುರುತಿಸಿ.
    a) ಬೌನ್ಸರ್ b) ಹೆನ್ರಿ ಸ್ಮಿತ್ c) ಅರ್ನಾಲ್ಡ್ d) ಗಾರ್ಡನರ್
14. ಇವುಗಳಲ್ಲಿ ಅವಧಾನವನ್ನು ಉಂಟುಮಾಡುವ ತಂತ್ರ
    a) ಪ್ರಶ್ನೋತ್ತರ ಕ್ರಮ b) ಪ್ರಶಾಂತ ವಾತಾವರಣ c) ಪ್ರಾಯೋಗಿಕ ಬೋಧನೆ d) ಮೇಲಿನ ಎಲ್ಲವೂ
15. ಐಸ್ ಕ್ರೀಮ್‌ನ್ನು ಕಂಡಾಗ ಬಾಯಲ್ಲಿ ನೀರೂರುವುದು, ಈರುಳ್ಳಿಯನ್ನು ಕತ್ತರಿಸುವಾಗ ಕಣ್ಣಲ್ಲಿ ನೀರು ಬರುವುದು - ಈ ನಿದರ್ಶನಗಳು ಗ್ಯಾನೆಯವರ ಕಲಿಕೆಯ ಯಾವ ಪ್ರಕಾರವನ್ನು ಸಮರ್ಥಿಸುತ್ತವೆ?
    a) ಸಂಜ್ಞಾ ಕಲಿಕೆ b) ಸರಣಿ ಕಲಿಕೆ c) ನಿಯಮಗಳ ಕಲಿಕೆ d) ಶಾಬ್ದಿಕ ಸಹಚರ್ಯ ಕಲಿಕೆ
16. ಒಂದೇ ರೀತಿಯ ಉಚ್ಚಾರಣೆ ಹೊಂದಿರುವ ಇಂಗ್ಲೀಷ್ ಭಾಷೆಯ **Hear-Here, Hare- Hair, There-Their** ರೀತಿಯ ಪದಗಳನ್ನು ಪ್ರತ್ಯೇಕವಾಗಿ ಗುರುತಿಸುವ, ಅವುಗಳಲ್ಲಿ ವ್ಯತ್ಯಾಸ ಮಾಡುವಂತಹ ಗ್ಯಾನೆಯವರ ಕಲಿಕೆಯ ಪ್ರಕಾರವನ್ನು ಗುರ್ತಿಸಿ.
    a) ಸರಣಿ ಕಲಿಕೆ b) ಪರಿಕಲ್ಪನಾ ಕಲಿಕೆ c) ಬಹುವಿಭೇಧಿಕರಣ ಕಲಿಕೆ d) ನಿಯಮಗಳ ಕಲಿಕೆ

17. 8 ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ರಮೇಶ ಎಂಬ ವಿದ್ಯಾರ್ಥಿಯು ತರಗತಿಯಲ್ಲಿ ಶಿಕ್ಷಕರು ಬೋಧಿಸಿದ ಪಠ್ಯಾಂಶಗಳನ್ನು ತನ್ನ ಸಹಪಾಠಿಗಳಿಗಿಂತ ವೇಗವಾಗಿ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಇದರ ಅರ್ಥವೆಂದರೆ -

a) ರಮೇಶನು ತನ್ನ ಸಹಪಾಠಿಗಳಿಗಿಂತ ಹೆಚ್ಚು ಮಾನಸಿಕ ಪಕ್ವತೆ ಸಾಧಿಸಿದ್ದಾನೆ.

b) ರಮೇಶನು ತನ್ನ ಸಹಪಾಠಿಗಳಿಗಿಂತ ಹೆಚ್ಚು ದೈಹಿಕ ಪಕ್ವತೆ ಸಾಧಿಸಿದ್ದಾನೆ.

c) ಸಹಪಾಠಿಗಳಿಗಿಂತ ರಮೇಶನು ಕಡಿಮೆ ಮಾನಸಿಕ ಪಕ್ವತೆ ಸಾಧಿಸಿದ್ದಾರೆ.

d) ಸಹಪಾಠಿಗಳಿಗಿಂತ ರಮೇಶನು ಕಡಿಮೆ ದೈಹಿಕ ಪಕ್ವತೆ ಸಾಧಿಸಿದ್ದಾರೆ.

18. ಅಲ್ಬರ್ಟ್ ಬಂಡೂರಾರವರ ವೀಕ್ಷಣಾ ಕಲಿಕೆಯ ಹಂತಗಳ ಸರಿಯಾದ ಅನುಕ್ರಮವನ್ನು ಗುರುತಿಸಿ.

a) ಅರ್ಜನೆ>ಧಾರಣೆ>ಕಾರ್ಯನಿರ್ವಹಣೆ>ಪರಿಣಾಮಗಳು

b) ಅರ್ಜನೆ> ಪರಿಣಾಮಗಳು>ಧಾರಣೆ>ಕಾರ್ಯನಿರ್ವಹಣೆ

c) ಧಾರಣೆ> ಅರ್ಜನೆ>ಕಾರ್ಯನಿರ್ವಹಣೆ>ಪರಿಣಾಮಗಳು

d) ಕಾರ್ಯನಿರ್ವಹಣೆ>ಧಾರಣೆ>ಅರ್ಜನೆ >ಪರಿಣಾಮಗಳು

19. ಕೌಶಲಗಳ ಕಲಿಕೆ, ಭಾಷಾ ಕಲಿಕೆ, ಲಲಿತ ಕಲೆಗಳ ಕಲಿಕೆಯಲ್ಲಿ ಅನುಕರಣೆಯ ಮಾದರಿಗಳನ್ನು ಒದಗಿಸುವ ಮೂಲಕ ಉತ್ತಮ ಕಲಿಕೆಯನ್ನು ಉಂಟುಮಾಡುತ್ತದೆ ಎಂದು ಪ್ರತಿಪಾದಿಸಿದ ಕಲಿಕಾ ಸಿದ್ಧಾಂತ

a) ವೀಕ್ಷಣಾ ಕಲಿಕೆ b) ಪ್ರಭುತ್ವ ಕಲಿಕೆ c) ಅನ್ವೇಷಣಾ ಕಲಿಕೆ d) ಜ್ಞಾನಾತ್ಮಕ ಕಲಿಕೆ

20. ತರಗತಿಯಲ್ಲಿ ಪಾಠಮಾಡುತ್ತಿರುವ ದೃಶ್ಯವೊಂದನ್ನು ವಿದ್ಯಾರ್ಥಿಯೊಬ್ಬ ಬಿಡಿಸುತ್ತಿರುವುದನ್ನು ಶಿಕ್ಷಕ ಗಮನಿಸುತ್ತಾರೆ. ಅತ್ಯಂತ ಸುಂದರವಾಗಿ ಚಿತ್ರಿಸಿರುವುದನ್ನು ಕಂಡು ಶಿಕ್ಷಕ ಆ ಮಗುವನ್ನು "ಮುಂದೆ, ನೀನೊಬ್ಬ ಅದ್ಭುತ ಚಿತ್ರಕಲಾವಿದನಾಗುವೆ" ಎಂದು ಹೇಳುತ್ತಾರೆ. ಶಿಕ್ಷಕನಿಂದ ಮಗುವಿಗೆ ಯಾವ ರೀತಿಯ ಅನುಭವ ದೊರೆಯಿತು?

a) ಬಾಹ್ಯ ಅಭಿಪ್ರೇರಣೆ c) ಕಲಿಕೆಯ ಒತ್ತಡ

b) ಆಂತರಿಕ ಅಭಿಪ್ರೇರಣೆ d) ಗುರಿಯತ್ತ ಮಾರ್ಗದರ್ಶನ

## II. ಹೊಂದಿಸಿ ಬರೆಯಿರಿ.

| | A | B |
|---|---|---|
| 1) | ಬಹುವಿಭೇಧೀಕರಣ ಕಲಿಕೆ | - ಗ್ಯಾನೆಯವರ ಕಲಿಕೆಯ ಪ್ರಕಾರ |
| 2) | ವಿಕಾಸಾತ್ಮಕ ಕಲಿಕೆ ಪ್ರತಿಪಾದಕ | - ಜೀನ್ ಪಿಯಾಜೆ |
| 3) | ಅನ್ವೇಷಣಾ ಕಲಿಕೆಯ ಪ್ರತಿಪಾದಕ | - ಜೆ. ಎಸ್. ಬ್ರೂನರ್ |
| 4) | ಪ್ರಭುತ್ವ ಕಲಿಕೆಯ ಪ್ರತಿಪಾದಕ | - ಬೆಂಜಾಮಿನ್ ಎಸ್. ಬ್ಲೂಮ್ |
| 5) | ಪರಿಹಾರಾತ್ಮಕ ಬೋಧನೆ | - ಪ್ರಭುತ್ವ ಕಲಿಕೆಯ ಕೊಡುಗೆ |
| 6) | ವೀಕ್ಷಣಾ ಕಲಿಕೆಯ ಪ್ರತಿಪಾದಕ | - ಆಲ್ಬರ್ಟ್ ಬಂಡೂರಾ |
| 7) | ಅಭಿಪ್ರೇರಣೆ | - ಚೈತನ್ಯಗೊಳಿಸು |
| 8) | ಬಹುಮಾನ ಮತ್ತು ಶಿಕ್ಷೆ | - ಬಾಹ್ಯ ಅಭಿಪ್ರೇರಕಗಳು |
| 9) | ಅವಧಾನ | - ಮನಸ್ಸಿನ ಏಕಾಗ್ರತೆ |
| 10) | ಪುನರಾವರ್ತನೆ | - ಸ್ಮೃತಿ ಸುಧಾರಣೆಗೆ ಒಂದು ಸಲಹೆ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಅಡಚಣೆ, ಸಂವೇದನಾ ಗತಿ, ಪ್ರಭುತ್ವ ಕಲಿಕೆ, ವೀಕ್ಷಣಾ ಕಲಿಕೆ, ಅಭಿಪ್ರೇರಣೆ, ಸಂಜ್ಞಾ ಕಲಿಕೆ, ಬಹುಮಾನ, ಪ್ರಾಯೋಗಿಕ ಬೋಧನೆ, ಸ್ಮೃತಿ)

1) ಸ್ಮಿತ್‌ರವರು ಕಲಿಕಾ ಪ್ರಕ್ರಿಯೆಯಲ್ಲಿ ಮೂರು ಅಂಶಗಳನ್ನು ಸೂಚಿಸಿದ್ದು, ಅದರಲ್ಲಿ ಪ್ರೇರಕ, ಗುರಿ, ಮತ್ತೊಂದು______

2) ಪಿಯಾಜೆಯವರ ವಿಕಾಸಾತ್ಮಕ ಕಲಿಕಾ ಸಿದ್ಧಾಂತದ ಹಂತಗಳಲ್ಲಿ ಮೊದಲನೇ ಹಂತ_____

3) 'ಪರಿಹಾರಾತ್ಮಕ ಬೋಧನೆ ಮತ್ತು ನಿರಂತರ ಮೌಲ್ಯಮಾಪನ' ಎಂಬ ಕ್ರಮಗಳನ್ನು ಸೂಚಿಸಿದ ಕಲಿಕಾ ಸಿದ್ಧಾಂತ_____

4) ಮಕ್ಕಳು ಇತರರ ವರ್ತನೆಗಳನ್ನು ಅನುಕರಣೆಯ ಮೂಲಕ ಕಲಿಯುವುದನ್ನು ಆಲ್ಬರ್ಟ್ ಬಂಡೂರಾ____ಎಂದು ಕರೆದರು.

5) ಒಂದು ಗುರಿಯ ಕಡೆಗೆ ವ್ಯಕ್ತಿಯ ವರ್ತನೆಯನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಸ್ಥಿತಿಗೆ_____ಎನ್ನುತ್ತೇವೆ.

6) ಶ್ರೇಣೀಕೃತ ಪಿರಮಿಡ್ ಆಕಾರದ 8 ಕಲಿಕಾ ಪ್ರಕಾರಗಳಲ್ಲಿ ಮೊದಲನೇ ಕಲಿಕಾ ಪ್ರಕಾರ____

7) ಅಭಿಪ್ರೇರಣೆ ಉಂಟುಮಾಡುವ ಕಾರ್ಯತಂತ್ರಗಳಿಗೆ ಉದಾಹರಣೆ____

8) ಅವಧಾನ ಉಂಟುಮಾಡುವಲ್ಲಿ ಬಳಸಬಹುದಾದ ತಂತ್ರಕ್ಕೆ ಉದಾಹರಣೆ_____

9) ಹಿಂದೆ ಕಲಿತಂತಹ ವಿಷಯಗಳನ್ನು ಅಥವಾ ಅನುಭವಗಳನ್ನು ಪುನಃ ಸ್ಮರಣೆಗೆ ತರುವುದನ್ನು ____ಎನ್ನುತ್ತೇವೆ.

**IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)**

1) ಕಲಿಕೆಯನ್ನು ವ್ಯಾಖ್ಯಾನಿಸಿ.

2) ಅನ್ವೇಷಣಾ ಕಲಿಕಾ ಸಿದ್ಧಾಂತದ ಪ್ರತಿಪಾದಕ ಯಾರು?

3) ಪ್ರಭುತ್ವ ಕಲಿಕಾ ಸಿದ್ಧಾಂತದ ಪ್ರತಿಪಾದಕ ಯಾರು?

4) ಪಕ್ವತೆ ಎಂದರೇನು?

5) ಅಭಿಪ್ರೇರಣೆ ಎಂದರೇನು?

6) Motivation ಪದದ ವ್ಯುತ್ಪತ್ತಿ ತಿಳಿಸಿ.

7) ಅವಧಾನದ ಅರ್ಥವೇನು?

8) ಸ್ಮೃತಿಯನ್ನು ವ್ಯಾಖ್ಯಾನಿಸಿ.

**V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)**

1) ಕಲಿಕೆಯ ಯಾವುದಾದರೂ ಎರಡು ಲಕ್ಷಣಗಳನ್ನು ಬರೆಯಿರಿ.

2) ವಿಕಾಸಾತ್ಮಕ ಕಲಿಕಾ ಸಿದ್ಧಾಂತದ ಎರಡು ಶೈಕ್ಷಣಿಕೆ ನಿಹಿತಾರ್ಥಗಳನ್ನು ತಿಳಿಸಿ.

3) ಅನ್ವೇಷಣಾ ಕಲಿಕಾ ಸಿದ್ಧಾಂತದ ಎರಡು ಶೈಕ್ಷಣಿಕೆ ನಿಹಿತಾರ್ಥಗಳನ್ನು ಬರೆಯಿರಿ.

4) ಪ್ರಭುತ್ವ ಕಲಿಕಾ ಸಿದ್ಧಾಂತದ ಎರಡು ಶೈಕ್ಷಣಿಕೆ ನಿಹಿತಾರ್ಥಗಳನ್ನು ಬರೆಯಿರಿ.

5) ವೀಕ್ಷಣಾ ಕಲಿಕಾ ಸಿದ್ಧಾಂತದ ಎರಡು ಶೈಕ್ಷಣಿಕೆ ನಿಹಿತಾರ್ಥಗಳನ್ನು ಬರೆಯಿರಿ.

6) ವೀಕ್ಷಣಾ ಕಲಿಕಾ ಸಿದ್ಧಾಂತದ ಯಾವುದೇ ಎರಡು ಹಂತಗಳನ್ನು ಬರೆಯಿರಿ.

7) ಅಭಿಪ್ರೇರಣೆಯ ಎರಡು ವಿಧಗಳಾವುವು?

8) ಅಭಿಪ್ರೇರಣೆ ಉಂಟುಮಾಡುವ ಎರಡು ಕಾರ್ಯತಂತ್ರಗಳನ್ನು ತಿಳಿಸಿ.

9) ಅವಧಾನದ ಎರಡು ಪ್ರಕಾರಗಳಾವುವು?

10) ಅವಧಾನದ ಯಾವುದೇ ಎರಡು ಲಕ್ಷಣಗಳನ್ನು ಬರೆಯಿರಿ.

11) ಅವಧಾನ ಉಂಟುಮಾಡುವ ಯಾವುದೇ ಎರಡು ತಂತ್ರಗಳನ್ನು ತಿಳಿಸಿ.

12) ಸ್ಮೃತಿಯ ಯಾವುದೇ ಎರಡು ವಿಧಗಳನ್ನು ತಿಳಿಸಿ.

**VI. ಐದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)**

1) ಕಲಿಕೆಯ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಗ್ಯಾನೆಯವರ 8 ಕಲಿಕೆಯ ಪ್ರಕಾರಗಳನ್ನು ಶ್ರೇಣೀಕೃತ ಪಿರಮಿಡ್ ಆಕಾರದಲ್ಲಿ ಅನುಕ್ರಮವಾಗಿ ರಚಿಸಿ.

3) ಪಿಯಾಜೆಯವರ ಜ್ಞಾನಾತ್ಮಕ ವಿಕಾಸದ ಹಂತಗಳನ್ನು ವಿವರಿಸಿ.

4) ವಿಕಾಸಾತ್ಮಕ ಕಲಿಕಾ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳನ್ನು ಬರೆಯಿರಿ.

5) ಅನ್ವೇಷಣಾ ಕಲಿಕೆಯ ಅನುಕೂಲಗಳನ್ನು ತಿಳಿಸಿ.

6) ಪ್ರಭುತ್ವ ಕಲಿಕೆಯ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳನ್ನು ಪಟ್ಟಿಮಾಡಿ.

7) ಬಂಡೂರಾ ಅವರ ಸಾಮಾಜಿಕ ಕಲಿಕಾ ಸಿದ್ಧಾಂತದ ಶೈಕ್ಷಣಿಕ ನಿಹಿತಾರ್ಥಗಳನ್ನು ತಿಳಿಸಿ.

8) ಕಲಿಕೆಯ ಸಂರಚನಾ ಮಾರ್ಗದ ಶೈಕ್ಷಣಿಕ ನಿಹಿತಾರ್ಥಗಳನ್ನು ಬರೆಯಿರಿ.

9) ಕಲಿಕೆಯ ಮೇಲೆ ಅಭಿಪ್ರೇರಣೆ ಹೇಗೆ ಪ್ರಭಾವ ಬೀರಿದೆ? ವಿವರಿಸಿ.

10) ಕಲಿಕೆಯ ಮೇಲೆ ಅವಧಾನದ ಪ್ರಭಾವವನ್ನು ವಿವರಿಸಿ.

11) ಸ್ಮೃತಿಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ವಿವರಿಸಿ.

12) ಸ್ಮೃತಿಯ ಸುಧಾರಣೆಗೆ ಸಲಹೆಗಳನ್ನು ಕೊಡಿ.

## ಘಟಕ_4 : ಸಮೂಹ ಗತಿಶೀಲತೆ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. ಗತಿಶೀಲತೆ (Dynamics) ಎಂಬ ಪದವನ್ನು ಮೊದಲಿಗೆ ಬಳಸಿದವರು.
   a) ರೂಸೋ  b) ಕರ್ಟ್ ಲೆವಿನ್  c) ಪಿಯಾಜೆ  d) ಕಾರ್ಟ್‌ರೈಟ್
2. Dynamics ಪದವು ಗ್ರೀಕ್ ಭಾಷೆಯಿಂದ ಉಗಮವಾದ ಪದ
   a) Diarchy  b) Dias  c) Dynamo  d) Dynasty
3. ಸಾಮಾಜಿಕ ಸಮೂಹಗಳಿಗೆ ಈ ಕೆಳಗಿನ ಉದಾಹರಣೆಗಳಲ್ಲಿ ತಪ್ಪಾಗಿರುವುದನ್ನು ಗುರುತಿಸಿ.
   a) ಕುಟುಂಬ  b) ಸಹಪಾಠಿಗಳು  c) ಗೆಳೆಯರ ಬಳಗ  d) ಜಾತ್ರೆಯಲ್ಲಿ ಸೇರಿದ ಜನ
4. ಸಮೂಹದ ಲಕ್ಷಣಗಳಿಗೆ ಸಂಬಂಧಿಸಿದಂತೆ ಇವುಗಳಲ್ಲಿ ತಪ್ಪಾದ ಲಕ್ಷಣ.
   a) ಅಂತರಕ್ರಿಯೆ  b) ಸಾಮಾನ್ಯ ಗುರಿ  c) ಜಡತ್ವ  d) ಸಮಾನ ಆಸಕ್ತಿ
5. ಸಮೂಹಗಳಲ್ಲಿ ಜರುಗುವ ಬದಲಾವಣೆಗಳನ್ನು ಕುರಿತಾದ ಜ್ಞಾನವನ್ನು ______ ಎನ್ನುತ್ತೇವೆ.
   a) ಪರಿವರ್ತನೆ  b) ಸಂಚರಣೆ  c) ಸಮೂಹ ಗತಿಶೀಲತೆ  d) ಹಿಂಬೀಳಿಕೆ
6. ಪ್ರಾಥಮಿಕ ಸಮೂಹ ಮತ್ತು ಮಾಧ್ಯಮಿಕ ಸಮೂಹ ಎಂದು ವರ್ಗೀಕರಿಸಿದವರು.
   a) ಸಮ್ನರ್  b) ಲೆವಿನ್  c) ಕ್ರಚ್‌ಫೀಲ್ಡ್  d) ಸಿ ಹೆಚ್ ಕೂಲೆ
7. ಸದಸ್ಯರ ಮಧ್ಯೆ ಪರಸ್ಪರ ಆತ್ಮೀಯತೆ, ಮುಖಾಮುಖಿ ಸಂಬಂಧಗಳಿರುವ ಸಾಮಾಜಿಕ ಸಮೂಹಕ್ಕೆ ___ಎನ್ನುವರು.
   a) ಜನಸಂದಣಿ  b) ಹೊರ ಸಮೂಹ  c) ಪ್ರಾಥಮಿಕ ಸಮೂಹ  d) ಮಾಧ್ಯಮಿಕ ಸಮೂಹ
8. ಇವುಗಳಲ್ಲಿ ಪ್ರಾಥಮಿಕ ಸಮೂಹದ ಲಕ್ಷಣ
   a) ಆತ್ಮೀಯತೆ  b) ಸಣ್ಣ ಗಾತ್ರ  c) ನಿರಂತರ ಸಂಬಂಧ  d) ಮೇಲಿನ ಎಲ್ಲವೂ
9. ಒಳಸಮೂಹ ಮತ್ತು ಹೊರ ಸಮೂಹ ಎಂಬ ಎರಡು ರೀತಿಯ ಸಮೂಹಗಳನ್ನು ವಿಂಗಡಿಸಿದವರು.
   a) ಮೇಯರ್  b) ಫ್ರಾಂಕ್ಲಿನ್  c) ಸಮ್ನರ್  d) ಪಿಯಾಜೆ
10. ಒಬ್ಬ ಉತ್ತಮ ನಾಯಕನಲ್ಲಿ ಇರಬೇಕಾದ ಗುಣಲಕ್ಷಣವನ್ನು ಈ ಕೆಳಗಿನ ಆಯ್ಕೆಯಿಂದ ಗುರುತಿಸಿ.
    a) ಹೆಚ್ಚಿನ ಜ್ಞಾನ ಮತ್ತು ಬುದ್ಧಿಶಕ್ತಿಯನ್ನು ಹೊಂದಿರಬೇಕು
    b) ತನ್ನ ಸಾಮರ್ಥ್ಯಗಳಲ್ಲಿ ನಂಬಿಕೆ ಮತ್ತು ಆತ್ಮವಿಶ್ವಾಸವಿರಬೇಕು.
    c) ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು.
    d) ಈ ಮೇಲ್ಕಂಡ ಎಲ್ಲವನ್ನೂ ಒಳಗೊಂಡಿದೆ.
11. ಸಮೂಹದ ಅಧಿಕಾರಗಳು ನಾಯಕನಲ್ಲಿ ಕೇಂದ್ರೀಕೃತವಾಗಿದ್ದರೆ ಅದನ್ನು ____ಶೈಲಿಯ ನಾಯಕತ್ವ ಎನ್ನುತ್ತೇವೆ.
    a) ಶ್ರೀಮಂತ ಪ್ರಭುತ್ವ  b) ಪ್ರಜಾಪ್ರಭುತ್ವ  c) ನಿರಂಕುಶ ಪ್ರಭುತ್ವ  d) ನಿರ್ಬಂಧರಹಿತ ಪ್ರಭುತ್ವ

**II. ಹೊಂದಿಸಿ ಬರೆಯಿರಿ.**

| | A | B |
|---|---|---|
| 1) | 'Dynamo' ಅರ್ಥ | - ಬಲ/ರಚನಾ ಶಕ್ತಿ |
| 2) | ಪರಸ್ಪರಾವಲಂಬಿತನ | - ಸಮೂಹದ ಲಕ್ಷಣ |
| 3) | ಕುಟುಂಬ | - ಪ್ರಾಥಮಿಕ ಸಮೂಹಕ್ಕೆ ಉದಾಹರಣೆ |
| 4) | ಕೆಲಸ ಮಾಡುವ ಸ್ಥಳಗಳು | - ಮಾಧ್ಯಮಿಕ ಸಮೂಹಕ್ಕೆ ಉದಾಹರಣೆ |
| 5) | ತರಗತಿಯ ನಾಯಕ | - ಶಿಕ್ಷಕ |
| 6) | ಸಮೂಹವನ್ನು ಮುನ್ನಡೆಸುವ ವ್ಯಕ್ತಿ | - ನಾಯಕ |
| 7) | ಅಧಿಕಾರ ವಿಕೇಂದ್ರೀಕರಣ | - ಪ್ರಜಾಪ್ರಭುತ್ವ ನಾಯಕತ್ವ |
| 8) | ಅಧಿಕಾರ ಅಧೀನವಾಗಿರುವುದು | - ನಿರಂಕುಶ ನಾಯಕತ್ವ |
| 9) | ಸದಸ್ಯರ ಕೇಂದ್ರಿತ | - ನಿರ್ಬಂಧರಹಿತ ನಾಯಕತ್ವ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಸಾಮಾಜಿಕ ಸಮೂಹ, ಮಾನಕಗಳು, ಶಿಕ್ಷಕ, ನಾಯಕತ್ವ, ಆತ್ಮೀಯತೆ, ಸಿ ಹೆಚ್ ಕೂಲೆ, ಸಮ್ನರ್, ಕೆಲಸದ ಸ್ಥಳ, ಪ್ರಜಾಪ್ರಭುತ್ವ)

1) ಮಾನವ ಸಂಬಂಧಗಳಿಂದ ಒಟ್ಟುಗೂಡಿದ ಯಾವುದೇ ಜನಸಂಗ್ರಹವನ್ನು____ ಎನ್ನುತ್ತೇವೆ.
2) ಸಾಮಾಜಿಕ ಸಮೂಹದ ಒಂದು ಸಾಮಾನ್ಯ ಲಕ್ಷಣ______
3) 'ತರಗತಿ ಸಮೂಹದ ನಾಯಕ' ಎಂದು ಕರೆಯಲ್ಪಡುವ ವ್ಯಕ್ತಿ______
4) ಪರಸ್ಪರರು ಗುರಿ ಸಾಧನೆಗೆ ಸ್ವಯಂ ಪ್ರಯತ್ನಿಸುವಂತೆ ವ್ಯಕ್ತಿಗಳ ಮೇಲೆ ಪ್ರಭಾವ ಬೀರುವ ಚಟುವಟಿಕೆಯೇ______
5) ಪ್ರಾಥಮಿಕ ಸಮೂಹಗಳ ಮುಖ್ಯ ಲಕ್ಷಣ ________
6) ಪ್ರಾಥಮಿಕ ಸಮೂಹ ಮತ್ತು ಮಾಧ್ಯಮಿಕ ಸಮೂಹ ಎಂದು ವರ್ಗೀಕರಿಸಿದವರು____
7) ಒಳ ಸಮೂಹ ಮತ್ತು ಹೊರ ಸಮೂಹ ಎಂದು ವರ್ಗೀಕರಿಸಿದವರು_____
8) ಮಾಧ್ಯಮಿಕ ಸಮೂಹಕ್ಕೆ ಒಂದು ಸೂಕ್ತ ಉದಾಹರಣೆ____
9) ಅಧಿಕಾರದ ವಿಕೇಂದ್ರೀಕರಣ ಹಾಗೂ ಸದಸ್ಯರ ಅಭಿಪ್ರಾಯಗಳಿಗೆ ಅವಕಾಶ ಮಾಡಿಕೊಡುವ ನಾಯಕತ್ವ ಶೈಲಿ___

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಸಮೂಹ ಗತಿಶೀಲತೆ ಪದವನ್ನು ವ್ಯಾಖ್ಯಾನಿಸಿ.
2) ಡೈನಮಿಕ್ಸ್ ಪದದ ವ್ಯುತ್ಪತ್ತಿ ತಿಳಿಸಿ.
3) ಸಾಮಾಜಿಕ ಸಮೂಹದ ಅರ್ಥವನ್ನು ತಿಳಿಸಿ.
4) ತರಗತಿ ಸಮೂಹ ಎಂದರೇನು?
5) ನಾಯಕತ್ವದ ಅರ್ಥವನ್ನು ಬರೆಯಿರಿ.
6) ಪ್ರಜಾಪ್ರಭುತ್ವ ನಾಯಕತ್ವ ಶೈಲಿ ಎಂದರೇನು?
7) ನಿರಂಕುಶ ಪ್ರಭುತ್ವ ನಾಯಕತ್ವ ಶೈಲಿ ಎಂದರೇನು?
8) ನಿರ್ಬಂಧರಹಿತ ನಾಯಕತ್ವ ಶೈಲಿ ಎಂದರೇನು?

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಸಮೂಹ ಗತಿಶೀಲತೆಯ ಎರಡು ಪ್ರಾಮುಖ್ಯತೆ ತಿಳಿಸಿ.
2) ಸಾಮಾಜಿಕ ಸಮೂಹಗಳ ಯಾವುದೇ ಎರಡು ಲಕ್ಷಣಗಳನ್ನು ತಿಳಿಸಿ.
3) ಸಿ. ಹೆಚ್. ಕೂಲೆಯವರ ಪ್ರಕಾರ ಸಮೂಹದ ವಿಧಗಳಾವುವು?
4) ಸಮ್ನರ್‌ರವರ ಪ್ರಕಾರ ಸಮೂಹದ ವಿಧಗಳಾವುವು?
5) ಪ್ರಾಥಮಿಕ ಸಮೂಹ ಎಂದರೇನು? ಒಂದು ಉದಾಹರಣೆ ಕೊಡಿ.
6) ಮಾಧ್ಯಮಿಕ ಸಮೂಹ ಎಂದರೇನು? ಒಂದು ಉದಾಹರಣೆ ಕೊಡಿ.
7) ನಾಯಕತ್ವದ ಯಾವುದೇ ಎರಡು ಶೈಲಿಗಳನ್ನು ಹೆಸರಿಸಿ.
8) ಪ್ರಜಾಪ್ರಭುತ್ವ ನಾಯಕತ್ವ ಶೈಲಿಯ ಎರಡು ಅನುಕೂಲಗಳನ್ನು ತಿಳಿಸಿ.
9) ಪ್ರಜಾಪ್ರಭುತ್ವ ನಾಯಕತ್ವ ಶೈಲಿಯ ಎರಡು ಅನಾನುಕೂಲಗಳನ್ನು ಬರೆಯಿರಿ.
10) ನಿರಂಕುಶ ಪ್ರಭುತ್ವ ನಾಯಕತ್ವ ಶೈಲಿಯ ಎರಡು ಅನುಕೂಲಗಳನ್ನು ತಿಳಿಸಿ.
11) ನಿರಂಕುಶ ಪ್ರಭುತ್ವ ನಾಯಕತ್ವ ಶೈಲಿಯ ಎರಡು ಅನಾನುಕೂಲಗಳನ್ನು ತಿಳಿಸಿ.

## VI. ಐದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಸಮೂಹ ಗತಿಶೀಲತೆಯ ಪ್ರಾಮುಖ್ಯತೆಯನ್ನು ತಿಳಿಸಿ.
2) ಸಮೂಹದ ಯಾವುದಾದರೂ ಐದು ಲಕ್ಷಣಗಳನ್ನು ವಿವರಿಸಿ.
3) ಪ್ರಾಥಮಿಕ ಹಾಗೂ ಮಾಧ್ಯಮಿಕ ಸಮೂಹಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.
4) ಪ್ರಾಥಮಿಕ ಸಮೂಹದ ಗುಣಲಕ್ಷಣಗಳನ್ನು ವಿವರಿಸಿ.
5) ಮಾಧ್ಯಮಿಕ ಸಮೂಹದ ಗುಣಲಕ್ಷಣಗಳನ್ನು ಪಟ್ಟಿಮಾಡಿ.
6) ಯಶಸ್ವಿ ನಾಯಕನೊಬ್ಬನು ಹೊಂದಿರಬೇಕಾದ ಗುಣಲಕ್ಷಣಗಳನ್ನು ಪಟ್ಟಿಮಾಡಿ.
7) ಪ್ರಜಾಪ್ರಭುತ್ವ ನಾಯಕತ್ವ ಶೈಲಿಯ ಅನುಕೂಲ ಮತ್ತು ಅನಾನುಕೂಲಗಳನ್ನು ವಿವರಿಸಿ.
8) ನಿರಂಕುಶ ನಾಯಕತ್ವ ಶೈಲಿಯ ಅನುಕೂಲ ಮತ್ತು ಅನಾನುಕೂಲಗಳನ್ನು ವಿವರಿಸಿ.

# ಘಟಕ_5 : ಶಿಕ್ಷಣ ಮತ್ತು ಸಮಾಜ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. Society ಪದದ ಲ್ಯಾಟಿನ ಭಾಷೆಯ ಮೂಲ

   a) Sociology b) Social c) Socius d) Soctrates

2. "ಸಮಾಜ ಎನ್ನುವುದು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ" ಎಂದು ಹೇಳಿದವರು.

   a) ಡರ್ಖಿಮ್ b) ಮೆಕೈವರ್-ಪೇಜ್ c) ವೆಲ್ಬನ್ d) ಗಿಡ್ಡಿಂಗ್ಸ್

3. ಇವುಗಳಲ್ಲಿ ಸಮಾಜದ ಲಕ್ಷಣ

   a) ಸಂಸ್ಕೃತಿ b) ಶ್ರಮವಿಭಜನೆ c) ಅವಲಂಬನೆ d) ಮೇಲಿನ ಎಲ್ಲವೂ

4. ಮುಕ್ತ ಹಾಗೂ ದೂರ ಶಿಕ್ಷಣ ಮಾದರಿಯಲ್ಲಿ ಶಿಕ್ಷಣ ನೀಡುವ ಸಂಸ್ಥೆಗಳು ಶಿಕ್ಷಣದ_____ನಿಯೋಗಗಳಾಗಿವೆ.

   a) ಅನೌಪಚಾರಿಕ b) ಔಪಚಾರಿಕ c) ಅಸಾಂಪ್ರದಾಯಕ d) ಸಾಂಪ್ರದಾಯಕ

5. ಇವುಗಳಲ್ಲಿ ಔಪಚಾರಿಕ ಶಿಕ್ಷಣವನ್ನು ಒದಗಿಸುವ ಒಂದು ನಿಯೋಗ

   a) ಶಾಲೆ b) ಕುಟುಂಬ c) ಸಮೂಹ ಮಾಧ್ಯಮ d) ಮುಕ್ತಶಾಲೆ

6. ಇವುಗಳಲ್ಲಿ ಅನೌಪಚಾರಿಕ ಶಿಕ್ಷಣವನ್ನು ಒದಗಿಸುವ ಒಂದು ನಿಯೋಗ

   a) ಶಾಲೆ b) ಕುಟುಂಬ c) ವಿಶ್ವವಿದ್ಯಾಲಯ d) ಕಾಲೇಜು

7. ಇವುಗಳಲ್ಲಿ ಅಸಾಂಪ್ರದಾಯಕ ಶಿಕ್ಷಣವನ್ನು ಒದಗಿಸುವ ಒಂದು ನಿಯೋಗ

   a) ಶಾಲೆ b) ಕಾಲೇಜು c) ಸಮಾಜ d) ಮುಕ್ತ ವಿಶ್ವವಿದ್ಯಾಲಯ

8. ಇವುಗಳಲ್ಲಿ ರಾಷ್ಟ್ರೀಯ ಮುಕ್ತ ಶಾಲೆಯ ಲಕ್ಷಣವನ್ನು ಗುರುತಿಸಿ.

   a) ಕಲಿಯಲು ವಯಸ್ಸಿನ ನಿರ್ಬಂಧವಿಲ್ಲ c) ಅಧ್ಯಯನ ಕೇಂದ್ರಗಳ ಮೂಲಕ ಕಲಿಕೆ

   b) ಆಸಕ್ತಿಯ ವಿಷಯಗಳನ್ನು ಆಯ್ಕೆ ಮಾಡಬಹುದು d) ಎಲ್ಲವೂ ಸರಿಯಿದೆ.

9. IGNOU ಇದರ ಸರಿಯಾದ ವಿಸ್ತೃತ ರೂಪ

   a) Indian Government National Open University
   b) Indian Government Network of Open Universities
   c) Indira Gandhi National Open University
   d) Indira Gandhi Network of Open Universities

10. Colere/Cultura ಎಂಬ ಲ್ಯಾಟಿನ್ ಪದಗಳಿಂದ ಉಗಮವಾಗಿರುವ ಶಬ್ಧ-

    a) Colour b) Creative c) Culture d) Character

**II. ಹೊಂದಿಸಿ ಬರೆಯಿರಿ**

| | A | B |
|---|---|---|
| 1) | ಸೋಶಿಯಸ್‌ನ ಅರ್ಥ | - ಒಡನಾಡಿತನ |
| 2) | ವಿಶ್ವವಿದ್ಯಾಲಯ | - ಶಿಕ್ಷಣದ ಔಪಚಾರಿಕ ನಿಯೋಗ |
| 3) | ಕುಟುಂಬ | - ಶಿಕ್ಷಣದ ಅನೌಪಚಾರಿಕ ನಿಯೋಗ |
| 4) | ಸಂಸ್ಕೃತಿ | - ಸಮಾಜದ ನಂಬಿಕೆ, ಮೌಲ್ಯಗಳ ಸಂಗ್ರಹ |
| 5) | ಜೀವನ ಕ್ರಮ | - ಸಮಾಜದ ಒಂದು ಲಕ್ಷಣ |
| 6) | ಫೌಂಡೇಷನ್ ಕೋರ್ಸ್ | - ರಾಷ್ಟ್ರೀಯ ಮುಕ್ತ ಶಾಲೆ ಒದಗಿಸುವ ಕೋರ್ಸ್ |
| 7) | 1985 ಸೆಪ್ಟೆಂಬರ್ 20 | - IGNOU ಸ್ಥಾಪನೆ |
| 8) | ನಳಂದಾ ಮುಕ್ತ ವಿಶ್ವವಿದ್ಯಾಲಯ | - ಬಿಹಾರ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ.

**(Famulus, ಸಾಮಾಜಿಕ ಪರಿವರ್ತನೆ, ಶಿಕ್ಷಣ, ಸಂಸ್ಕೃತಿ, 1986, ಮುಕ್ತಶಾಲೆ, 1989, IGNOU, ಮುಕ್ತ ವಿಶ್ವವಿದ್ಯಾಲಯ, ಸಾಂಸ್ಕೃತಿಕ ಸಂಚರಣೆ)**

1) Family ಎಂಬ ಪದದ ರೋಮನ್ ಭಾಷೆಯ ಮೂಲಪದ_____
2) ಸಮಾಜದ ಪ್ರಕ್ರಿಯೆ ಹಾಗೂ ರಚನೆಯಲ್ಲಿ ಉಂಟಾಗುವ ಬದಲಾವಣೆಗಳನ್ನು _____ಎನ್ನುತ್ತೇವೆ.
3) ಸಮಾಜದಲ್ಲಿ ಸ್ತ್ರೀಯರ ಸಬಲೀಕರಣ, ದುರ್ಬಲ ವರ್ಗದವರ ಸುಧಾರಣೆ ಮತ್ತು ವೈಜ್ಞಾನಿಕ ಅರಿವಿಗೆ ಕಾರಣವಾದ ಸಾಧನ__
4) ಸಾಂಪ್ರದಾಯಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಮತ್ತು ಆದರ್ಶಗಳ ಸಂಗ್ರಹವನ್ನು ____ಎನ್ನುವರು.
5) ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ವರ್ಷ_____
6) ವಯಸ್ಸಿನ ನಿರ್ಬಂಧವಿಲ್ಲದೇ ಶಾಲಾ ಶಿಕ್ಷಣ ಪಡೆಯಲು ಅವಕಾಶ ನೀಡುವ ವ್ಯವಸ್ಥೆ ________
7) ರಾಷ್ಟ್ರೀಯ ಮುಕ್ತ ಶಾಲೆ ಸ್ಥಾಪನೆಯಾದ ವರ್ಷ ________
8) ಮುಕ್ತ ವಿಶ್ವವಿದ್ಯಾಲಯಕ್ಕೆ ಒಂದು ಸೂಕ್ತ ಉದಾಹರಣೆ____
9) ಮುಕ್ತ ಹಾಗೂ ದೂರ ಶಿಕ್ಷಣ ಮಾದರಿಯಲ್ಲಿ ಉನ್ನತ ಶಿಕ್ಷಣ ನೀಡುವ ವ್ಯವಸ್ಥೆ ______
10) ಸಾರ ಸಂಗ್ರಹಗೊಂಡ ಸಂಸ್ಕೃತಿಯು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗುವ ಪ್ರಕ್ರಿಯೆಗೆ_____ಎನ್ನುವರು.

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಸಮಾಜದ ಅರ್ಥ ಕುರಿತು ಒಂದು ವ್ಯಾಖ್ಯೆ ಕೊಡಿ.
2) ಕುಟುಂಬದ ಅರ್ಥವೇನು?
3) ಸಾಮಾಜಿಕ ಪರಿವರ್ತನೆಯನ್ನು ವ್ಯಾಖ್ಯಾನಿಸಿ.
4) ಸಾಂಸ್ಕೃತಿಕ ಸಂಚರಣೆ ಎಂದರೇನು?
5) 'ಸಂಸ್ಕೃತಿ' ಶಬ್ದದ ಅರ್ಥವೇನು?
6) ಮುಕ್ತ ಶಾಲೆ ಎಂದರೇನು?
7) ಮುಕ್ತ ವಿಶ್ವವಿದ್ಯಾಲಯ ಎಂದರೇನು?
8) IGNOU ಇದರ ಪೂರ್ಣ ರೂಪ ಬರೆಯಿರಿ.

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಸಮಾಜದ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
2) ಶಿಕ್ಷಣದ ಔಪಚಾರಿಕ ನಿಯೋಗ ಎಂದರೇನು? ಉದಾಹರಣೆ ಕೊಡಿ.
3) ಶಿಕ್ಷಣದ ಅನೌಪಚಾರಿಕ ನಿಯೋಗ ಎಂದರೇನು? ಉದಾಹರಣೆ ಕೊಡಿ.
4) ಶಿಕ್ಷಣದ ಅಸಾಂಪ್ರದಾಯಿಕ ನಿಯೋಗ ಎಂದರೇನು? ಉದಾಹರಣೆ ಕೊಡಿ.
5) ಆಗ್ ಬರ್ನ್‌ರವರ ಪ್ರಕಾರ ಕುಟುಂಬದ ಪ್ರಮುಖ ಎರಡು ಕಾರ್ಯಗಳನ್ನು ತಿಳಿಸಿ.
6) ರಾಷ್ಟ್ರೀಯ ಮುಕ್ತ ಶಾಲೆಯ ಎರಡು ಲಕ್ಷಣಗಳನ್ನು ತಿಳಿಸಿ.
7) ರಾಷ್ಟ್ರೀಯ ಮುಕ್ತ ಶಾಲೆ ಒದಗಿಸುವ ಕಲಿಕೆಯ ಎರಡು ಕಾರ್ಯಕ್ರಮಗಳನ್ನು ತಿಳಿಸಿ.
8) ಮುಕ್ತ ವಿಶ್ವವಿದ್ಯಾಲಯಗಳಿಗೆ ಎರಡು ಉದಾಹರಣೆ ಕೊಡಿ.
9) ಸಾಮಾಜಿಕ ಪರಿವರ್ತನೆಯನ್ನು ನಿರ್ಧರಿಸುವ ಎರಡು ಅಂಶಗಳನ್ನು ಬರೆಯಿರಿ.
10) ಸಾಂಸ್ಕೃತಿಕ ಸಂಚರಣೆಯಲ್ಲಿ ಶಿಕ್ಷಣದ ಎರಡು ಕಾರ್ಯಗಳಾವುವು?

## VI. ಐದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಸಮಾಜದ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2) ಶಿಕ್ಷಣದ ಔಪಚಾರಿಕ ನಿಯೋಗವಾಗಿ ಶಾಲೆಯ ಶೈಕ್ಷಣಿಕ ಕಾರ್ಯಗಳನ್ನು ವಿವರಿಸಿ.
3) ಶಿಕ್ಷಣದ ಅನೌಪಚಾರಿಕ ನಿಯೋಗವಾಗಿ ಕುಟುಂಬದ ಶೈಕ್ಷಣಿಕ ಕಾರ್ಯಗಳನ್ನು ವಿವರಿಸಿ.
4) ರಾಷ್ಟ್ರೀಯ ಮುಕ್ತ ಶಾಲೆಯ ಲಕ್ಷಣಗಳನ್ನು ತಿಳಿಸಿ.
5) ಮುಕ್ತ ವಿಶ್ವವಿದ್ಯಾಲಯಗಳ ಕಾರ್ಯಗಳನ್ನು ಪಟ್ಟಿಮಾಡಿ.
6) ಸಾಮಾಜಿಕ ಪರಿವರ್ತನೆಯನ್ನು ನಿರ್ಧರಿಸುವ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
7) 'ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಸಾಧನ. ಈ ಹೇಳಿಕೆಯನ್ನು ಸಮರ್ಥಿಸಿ.

# ಘಟಕ_6 : ಶೈಕ್ಷಣಿಕ ಅರ್ಥಶಾಸ್ತ್ರ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. 'Economics' ಶಬ್ದದ ಮೂಲ ಅರ್ಥ

   a) ಪಕ್ಷ ನಿರ್ವಹಣೆ  b) ಆಟದ ನಿರ್ವಹಣೆ  c) ಕಛೇರಿ ನಿರ್ವಹಣೆ  d) ಮನೆಯ ನಿರ್ವಹಣೆ

2. 'ಅರ್ಥಶಾಸ್ತ್ರದ ಪಿತಾಮಹ' ಎಂದು ಹೆಸರಾದವರು ಯಾರು?

   a) ಮಾರ್ಷಲ್  b) ಆಡಂಸ್ಮಿತ್  c) ಡೇವಿಸನ್  d) ಕರ್ಟ್ ಲೆವಿನ್

3. ಹರ್ಬಿನ್‌ಸನ್ ಮತ್ತು ಮೇಯರ್‌ರವರು "ಆರ್ಥಿಕ ಅಭಿವೃದ್ಧಿಯ ಬೀಜ ಮತ್ತು ಹೂವು" ಎಂದು ಯಾವುದನ್ನು ಕರೆದಿದ್ದಾರೆ?

   a) ಶಿಕ್ಷಣ  b) ಕೃಷಿ  c) ಕೈಗಾರಿಕೆ  d) ವಾಣಿಜ್ಯ

4. 'Consumption' ಪದವು ಈ ಪದದಿಂದ ವ್ಯುತ್ಪತ್ತಿ ಹೊಂದಿದೆ.

   a) Concern  b) Confuse  c) Consummate  d) Cosmetic

5. Consummate ಶಬ್ದದ ಅರ್ಥ

   a) ಸುಧಾರಿಸು  b) ತೃಪ್ತಿಗೊಳಿಸು  c) ತೊಡಗಿಸು  d) ಸ್ವೀಕರಿಸು

6. "ಶಿಕ್ಷಣವು ಅನುಭೋಗಕ್ಕಿಂತ ಹೆಚ್ಚು ಉತ್ಪಾದಕ ವಸ್ತುವಾಗಿದೆ" ಎಂದು ಹೇಳಿದವರು.

   a) ಸ್ಕಿನ್ನರ್  b) ಡೇವಿಸನ್  c) ವ್ಯಾಟ್ಸನ್  d) ರೈಬರ್ನ್

7. ಶಿಕ್ಷಣದಲ್ಲಿ ಹೂಡಿಕೆಗೆ ಸಂಬಂಧಿಸಿದಂತೆ ಕೆಲವು ವ್ಯಾಖ್ಯಾನಗಳನ್ನು ಕೊಟ್ಟಿದ್ದು ಅವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿ.

| ವ್ಯಾಖ್ಯಾನಕಾರರು | ವ್ಯಾಖ್ಯಾನಗಳು |
|---|---|
| 1. ಎಡ್ವರ್ಡ್ ಇ ಡೇವಿಸನ್ | - "ಶಿಕ್ಷಣವು ಅನುಭೋಗಕ್ಕಿಂತ ಹೆಚ್ಚು ಉತ್ಪಾದಕ ವಸ್ತುವಾಗಿದೆ" |
| 2. ಆಲ್ಫ್ರೆಡ್ ಮಾರ್ಷಲ್ | - "ಶಿಕ್ಷಣವು ಒಂದು ರಾಷ್ಟ್ರೀಯ ಹೂಡಿಕೆಯಾಗಿದೆ" |
| 3. ಜೆ ಎಸ್ ಮಿಲ್ | - "ಸಂಪತ್ತು ವ್ಯಕ್ತಿಗಳಿಗೆ ಹೊರತು, ಜನರನ್ನು ಸಂಪತ್ತು ಎಂದು ಅರ್ಥೈಸಬಾರದು" |

   a) 1ನೇ ಹೇಳಿಕೆ ಮಾತ್ರ  c) 3ನೇ ಹೇಳಿಕೆ ಮಾತ್ರ
   b) 2ನೇ ಹೇಳಿಕೆ ಮಾತ್ರ  d) 1,2,3 ಹೇಳಿಕೆಗಳು ಸರಿಯಾಗಿವೆ

8. ಒಂದು ರಾಷ್ಟ್ರದ ಪ್ರಗತಿಯು ಆ ದೇಶದ ಯಾವ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದೆ?

   a) ನೈಸರ್ಗಿಕ ಸಂಪನ್ಮೂಲಗಳು  c) ಆರ್ಥಿಕ ಸಂಪನ್ಮೂಲಗಳು
   b) ಮಾನವ ಸಂಪನ್ಮೂಲಗಳು  d) ಈ ಎಲ್ಲವೂ ಸೇರಿವೆ

9. ಮಾನವ ಸಂಪನ್ಮೂಲ ಅಭಿವೃದ್ಧಿಯ ಮಾರ್ಗಗಳಲ್ಲಿ ಈ ಕೆಳಗಿನ ಸರಿಯಾದುದ್ದನ್ನು ಗುರುತಿಸಿ.

   a) ಉದ್ಯೋಗಾವಧಿ ತರಬೇತಿ ನೀಡುವುದು  c) ಔಪಚಾರಿಕ ಶಿಕ್ಷಣ ನೀಡುವುದು
   b) ವಯಸ್ಕರ ಶಿಕ್ಷಣ ನೀಡುವುದು  d) ಈ ಎಲ್ಲವೂ ಸರಿಯಿದೆ

**II. ಹೊಂದಿಸಿ ಬರೆಯಿರಿ**

| A | B |
|---|---|
| 1) Economics ನಿಷ್ಪತ್ತಿ | - OIKOS + NOMUS |
| 2) ಅರ್ಥಶಾಸ್ತ್ರ ಎಂದರೆ | - ಸಂಪತ್ತಿನ ಅಧ್ಯಯನ |
| 3) ಅನುಭೋಗ ಎಂದರೆ | - ಸರಕು-ಸೇವೆಗಳನ್ನು ಬಳಸುವುದು |
| 4) ಮಾನವ ಸಂಪನ್ಮೂಲ | - ಸುಶಿಕ್ಷಿತ ಮತ್ತು ಕೌಶಲಯುತ ಜನರು |
| 5) Consumate ಅರ್ಥ | - ತೃಪ್ತಿಗೊಳಿಸು |
| 6) ಅರ್ಥಶಾಸ್ತ್ರದ ಜನಕ | - ಆಡಂ ಸ್ಮಿತ್ |
| 7) ಹೂಡಿಕೆ ಎಂದರೆ | - ಬಂಡವಾಳ ತೊಡಗಿಸುವುದು |

**III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ**

(ಮನೆಯ ನಿರ್ವಹಣೆ, ಅರ್ಥಶಾಸ್ತ್ರ, ಅನುಭೋಗ, ಮಾರ್ಷಲ್, ಕೌಶಲ ತರಬೇತಿ, ಜೆ ಎಸ್ ಮಿಲ್)

1) Oikos ಮತ್ತು Nomus ಶಬ್ದಗಳ ಮೂಲ ಅರ್ಥ______
2) ಸಂಪತ್ತನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು_____ ಎನ್ನುವರು.
3) ಸರಕು ಮತ್ತು ಸೇವೆಗಳ ಮೂಲಕ ಬಯಕೆಗಳನ್ನು ಈಡೇರಿಸಿಕೊಳ್ಳುವ ಕ್ರಿಯೆಗೆ _____ ಎನ್ನುತ್ತೇವೆ.
4) "ಶಿಕ್ಷಣವು ಒಂದು ರಾಷ್ಟ್ರೀಯ ಹೂಡಿಕೆಯಾಗಿದೆ" ಎಂದು ____ ಹೇಳಿಕೆ ನೀಡಿದ್ದಾರೆ.
5) ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವ ಒಂದು ಅತ್ಯುತ್ತಮ ಕ್ರಮ _____
6) "ಸಂಪತ್ತು ವ್ಯಕ್ತಿಗಳಿಗೆ ಹೊರತು, ಜನರನ್ನು ಸಂಪತ್ತು ಎಂದು ಅರ್ಥೈಸಬಾರದು" ಎಂದು ______ ರವರು ಹೇಳಿದ್ದಾರೆ.

**IV. ಒಂದು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಅರ್ಥಶಾಸ್ತ್ರವನ್ನು ವ್ಯಾಖ್ಯಾನಿಸಿ.
2) ಶೈಕ್ಷಣಿಕ ಅರ್ಥಶಾಸ್ತ್ರ ಎಂದರೇನು?
3) ಅನುಭೋಗ ಎಂದರೇನು?
4) Consumtion ಪದದ ವ್ಯುತ್ಪತ್ತಿ ತಿಳಿಸಿ.
5) ಶಿಕ್ಷಣದಲ್ಲಿ ಅನುಭೋಗವೆಂದರೇನು?
6) ಹೂಡಿಕೆಯ ಅರ್ಥವೇನು?
7) ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೇನು?
8) ವಿಸ್ತರಿಸಿ. HDI, HRD, UNDP

**V. ಎರಡು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಶೈಕ್ಷಣಿಕ ಅರ್ಥಶಾಸ್ತ್ರದ ಎರಡು ಮಹತ್ವ ತಿಳಿಸಿ.
2) ಶಿಕ್ಷಣದಲ್ಲಿ ಹೂಡಿಕೆಯ ಎರಡು ಅಗತ್ಯಗಳನ್ನು ತಿಳಿಸಿ.
3) ಬಂಡವಾಳದ ಎರಡು ಬಗೆಯನ್ನು ಹೆಸರಿಸಿ.
4) ಶುಲ್ಜ್‌ರವರ ಪ್ರಕಾರ ಅನುಭೋಗದಿಂದ ದೊರೆಯುವ ಎರಡು ಪ್ರಯೋಜನಗಳಾವುವು?
5) ಹೂಡಿಕೆಯ ಬಗ್ಗೆ ಆಲ್ಪ್ರೆಡ್ ಮಾರ್ಷಲ್ ಮತ್ತು ಡೇವಿಸನ್ ರವರ ಅಭಿಪ್ರಾಯಗಳೇನು?
6) ಒಂದು ರಾಷ್ಟ್ರದ ಪ್ರಗತಿಯು ಅವಲಂಬನೆಯಾಗಿರುವ ಯಾವುದೇ ಎರಡು ಬಗೆಯ ಸಂಪನ್ಮೂಲಗಳನ್ನು ಹೆಸರಿಸಿ.
7) ಸಂಪನ್ಮೂಲ ಅಭಿವೃದ್ಧಿಯ ಯಾವುದೇ ಎರಡು ಮಾರ್ಗಗಳನ್ನು ತಿಳಿಸಿ.

**VI. ಐದು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ವಿವರಿಸಿ.
2) 'ಶಿಕ್ಷಣವು ಒಂದು ಅನುಭೋಗವಾಗಿದೆ' ಎಂಬ ಹೇಳಿಕೆಯನ್ನು ಸಮರ್ಥಿಸಿ.
3) 'ಶಿಕ್ಷಣವು ಒಂದು ಹೂಡಿಕೆಯಾಗಿದೆ' ಎಂಬ ಹೇಳಿಕೆಯನ್ನು ಸಮರ್ಥಿಸಿ.
4) ಶಿಕ್ಷಣದ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಯ ಪ್ರಕ್ರಿಯೆ ಮತ್ತು ವಿಧಾನಗಳನ್ನು ಪಟ್ಟಿಮಾಡಿ.
5) ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ವಿವರಿಸಿ.

## ಘಟಕ_7 : ಮಾರ್ಗದರ್ಶನ ಮತ್ತು ಸಮಾಲೋಚನೆ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. ನಿರ್ದೇಶಿಸು, ಗಮನಸೆಳೆ, ಮಾರ್ಗತೋರು ಎಂಬ ಅರ್ಥಗಳನ್ನು ಕೊಡುವ ಶಬ್ದ
   a) ಮಾರ್ಗದರ್ಶನ b) ಅಡಚಣೆ c) ಪಠ್ಯಕ್ರಮ d) ನಿಯೋಜನೆ
2. ವಿದ್ಯಾರ್ಥಿಗಳ ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದಂತೆ ಜ್ಞಾನಾತ್ಮಕ ವಿಕಾಸಕ್ಕಾಗಿ ನೀಡುವ ಮಾರ್ಗದರ್ಶನ
   a) ಆರೋಗ್ಯ b) ಶೈಕ್ಷಣಿಕ c) ನಿಯೋಜನಾ d) ವೃತ್ತಿ
3. ಇವುಗಳಲ್ಲಿ ಶೈಕ್ಷಣಿಕ ಮಾರ್ಗದರ್ಶನಕ್ಕೆ ಸಂಬಂಧಿಸಿರುವುದನ್ನು ಗುರ್ತಿಸಿ.
   a) ಪಠ್ಯಕ್ರಮದ ಆಯ್ಕೆ b) ಅನುತ್ತೀರ್ಣ ತಡೆಯವುದು c) ಅಶಿಸ್ತು ನಿವಾರಣೆ d) ಮೇಲಿನ ಎಲ್ಲವೂ
4. ಇವುಗಳಲ್ಲಿ ಯಾವುದು ವೃತ್ತಿ ಮಾರ್ಗದರ್ಶನಕ್ಕೆ ಸಂಬಂಧಿಸಿದೆ?
   a) ಪಠ್ಯಕ್ರಮದ ಆಯ್ಕೆ b) ಅಪವ್ಯಯ ತಡೆಯವುದು c) ಉದ್ಯೋಗದಲ್ಲಿ ತೃಪ್ತಿ d) ಕೋರ್ಸ್ ಬಗ್ಗೆ ಜಾಗೃತಿ

5. ಮಾರ್ಗದರ್ಶನದ ಸೇವೆಗಳಿಗೆ ಸಂಬಂಧಿಸಿದಂತೆ ಇವುಗಳಲ್ಲಿ ತಪ್ಪಾಗಿರುವುದು.

a) ಮಾಹಿತಿ ಸೇವೆ b) ಆರೋಗ್ಯ ಸೇವೆ c) ನಿಯೋಜನಾ ಸೇವೆ d) ಹಣಕಾಸು ಸೇವೆ

6. ಸಮಾಲೋಚನೆಯು ಒಂದು ____ಪ್ರಕ್ರಿಯೆಯಾಗಿದೆ.

a) ತ್ರಿಮುಖ b) ಏಕ ಮುಖ c) ದ್ವಿಮುಖ d) ಬಹುಮುಖ

7. ಸಮಾಲೋಚನೆಯ ತಂತ್ರಗಳಲ್ಲಿ ಈ ಕೆಳಗಿನ ಯಾವುದು ತಪ್ಪಾಗಿದೆ?

a) ನಿರ್ದೇಶಿತ ಸಮಾಲೋಚನೆ c) ಸಮ್ಮಿಶ್ರ ಸಮಾಲೋಚನೆ

b) ಅನಿರ್ದೇಶಿತ ಸಮಾಲೋಚನೆ d) ಪರೋಕ್ಷ ಸಮಾಲೋಚನೆ

8. ನಿರ್ದೇಶಿತ ಸಮಾಲೋಚನಾ ತಂತ್ರವನ್ನು ಪ್ರತಿಪಾದಿಸಿದವರು_

a) ಮೇಯರ್ಸ್ b) ಕಾರ್ಲ್ ರೋಜರ್ಸ್ c) ಇ ಜಿ ವಿಲಿಯಂಸನ್ d) ರೇಮಾಂಟ್

9. ಅನಿರ್ದೇಶಿತ ಸಮಾಲೋಚನಾ ತಂತ್ರವನ್ನು ಪ್ರತಿಪಾದಿಸಿದವರು_

a) ಟೇಲರ್ b) ರೈಬರ್ನ್ c) ವಿಲಿಯಂಸನ್ d) ಕಾರ್ಲ್ ರೋಜರ್ಸ್

10. ಸಲಹೆ ಪಡೆಯುವ ವ್ಯಕ್ತಿಯೇ ಪ್ರಮುಖವಾಗಿದ್ದರೆ ಅದು ____ಸಮಾಲೋಚನಾ ತಂತ್ರ.

a) ನಿರ್ದೇಶಿತ b) ಅನಿರ್ದೇಶಿತ c) ಸಮ್ಮಿಶ್ರ d) ತಪಾಸಣಾ

## II. ಹೊಂದಿಸಿ ಬರೆಯಿರಿ

| A | B |
|---|---|
| 1) ಶಾಲೆಯಲ್ಲಿ ಹೊಂದಾಣಿಕೆ | - ಶೈಕ್ಷಣಿಕ ಮಾರ್ಗದರ್ಶನ |
| 2) ಭವಿಷ್ಯದ ಯೋಜನೆ | - ವೃತ್ತಿ ಮಾರ್ಗದರ್ಶನ |
| 3) ಸಮಾಲೋಚನೆ ಒಂದು | - ದ್ವಿಮುಖ ಪ್ರಕ್ರಿಯೆ |
| 4) ಸಲಹಾರ್ಥಿ ಕೇಂದ್ರಿತ ಸಮಾಲೋಚನೆ | - ಅನಿರ್ದೇಶಿತ ಸಮಾಲೋಚನೆ |
| 5) ನಿರ್ದೇಶಿತ ಸಮಾಲೋಚನೆ ಪ್ರತಿಪಾದಕ | - E. G. ವಿಲಿಯಂಸನ್ |
| 6) ಅನಿರ್ದೇಶಿತ ಸಮಾಲೋಚನೆ ಪ್ರತಿಪಾದಕ | - ಕಾರ್ಲ್ ರೋಜರ್ಸ್ |
| 7) ಸಮ್ಮಿಶ್ರ ಸಮಾಲೋಚನೆ ಪ್ರತಿಪಾದಕ | - F. C. ಥಾರ್ನೆ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಮಾರ್ಗದರ್ಶನ, ಶೈಕ್ಷಣಿಕ, ವೃತ್ತಿ, ವೈಯಕ್ತಿಕ, ಆರೋಗ್ಯ ಸೇವೆ, ಸಮಾಲೋಚನೆ, E G ವಿಲಿಯಂಸನ್, ನಿರ್ದೇಶಿತ ಸಮಾಲೋಚನೆ, ಅನಿರ್ದೇಶಿತ ಸಮಾಲೋಚನೆ)

1) ಅನುಭವಿ ವ್ಯಕ್ತಿಯು ಅನನುಭವಿ ವ್ಯಕ್ತಿಗೆ ಸಮಸ್ಯೆ ಪರಿಹರಿಸಿಕೊಳ್ಳಲು ನೀಡುವ ಸಹಾಯವೇ ____.
2) ಶಿಕ್ಷಣದ ಕೋರ್ಸ್ ಮತ್ತು ತರಬೇತಿಯ ಬಗ್ಗೆ ನೀಡುವ ಸಲಹೆಗಳನ್ನು _____ಮಾರ್ಗದರ್ಶನ ಎನ್ನುವರು.
3) ಉತ್ಪಾದನೆ ಮತ್ತು ಉದ್ಯೋಗದಲ್ಲಿ ತೃಪ್ತಿಯ ಬಗ್ಗೆ ನೀಡುವ ಸಲಹೆಗಳನ್ನು______ಮಾರ್ಗದರ್ಶನ ಎನ್ನುವರು.
4) ವ್ಯಕ್ತಿಯ ಆರೋಗ್ಯ, ಕೌಟುಂಬಿಕ ಮತ್ತು ಲೈಂಗಿಕ ಸಮಸ್ಯೆಗಳ ಕುರಿತು ನೀಡುವ ಮಾರ್ಗದರ್ಶನವೆಂದರೆ_____
5) ರೋಗಗಳು, ವೈದ್ಯಕೀಯ ಸೇವೆ, ಚಿಕಿತ್ಸೆಗಳ ಬಗ್ಗೆ ನೀಡುವ ಸೇವೆಯನ್ನು_______ಎನ್ನುತ್ತೇವೆ.
6) ಸಲಹೆಗಾರ ಮತ್ತು ಸಲಹೆ ಪಡೆಯುವ ಇಬ್ಬರು ವ್ಯಕ್ತಿಗಳ ಮುಖಾಮುಖಿ ಸಂಬಂಧವನ್ನು _____ಎನ್ನುತ್ತೇವೆ.
7) ನಿರ್ದೇಶಿತ ಸಮಾಲೋಚನೆಯ ಪ್ರತಿಪಾದಕರು_____
8) ಸಮಾಲೋಚನೆಯ ಪ್ರಕ್ರಿಯೆಯಲ್ಲಿ ಸಲಹೆಗಾರನೇ ಕೇಂದ್ರೀಕೃತನಾಗಿದ್ದರೆ ಅದು______
9) ಸಮಾಲೋಚನೆಯ ಪ್ರಕ್ರಿಯೆಯಲ್ಲಿ ಸಲಹೆ ಪಡೆಯುವವನೇ ಕೇಂದ್ರ ಬಿಂದು ಆಗಿದ್ದರೆ ಅದು_____

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಮಾರ್ಗದರ್ಶನ ಪದವನ್ನು ವ್ಯಾಖ್ಯಾನಿಸಿ.
2) ಶೈಕ್ಷಣಿಕ ಮಾರ್ಗದರ್ಶನ ಎಂದರೇನು?
3) ವೃತ್ತಿ ಮಾರ್ಗದರ್ಶನ ಎಂದರೇನು?
4) ವೈಯಕ್ತಿಕ ಮಾರ್ಗದರ್ಶನದ ಅರ್ಥವೇನು?
5) ಆರೋಗ್ಯ ಸೇವೆಯ ಅರ್ಥವನ್ನು ಬರೆಯಿರಿ.
6) ಸಮಾಲೋಚನೆ ಪದವನ್ನು ವ್ಯಾಖ್ಯಾನಿಸಿ.
7) ನಿರ್ದೇಶಿತ ಸಮಾಲೋಚನೆ ಎಂದರೇನು?
8) ಅನಿರ್ದೇಶಿತ ಸಮಾಲೋಚನೆ ಎಂದರೇನು?

**V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)**

1) ಮಾರ್ಗದರ್ಶನದ ಯಾವುದೇ ಎರಡು ತತ್ವಗಳನ್ನು ಬರೆಯಿರಿ.
2) ಶೈಕ್ಷಣಿಕ ಮಾರ್ಗದರ್ಶನದ ಎರಡು ಮಹತ್ವ ಬರೆಯಿರಿ.
3) ವೃತ್ತಿ ಮಾರ್ಗದರ್ಶನದ ಎರಡು ಮಹತ್ವ ಬರೆಯಿರಿ.
4) ವೈಯಕ್ತಿಕ ಮಾರ್ಗದರ್ಶನದ ಎರಡು ಪ್ರಾಮುಖ್ಯತೆ ತಿಳಿಸಿ.
5) ಮಾರ್ಗದರ್ಶನದ ಯಾವುದೇ ಎರಡು ಸೇವೆಗಳನ್ನು ಹೆಸರಿಸಿ.
6) ಮಾಹಿತಿ ಸೇವೆಯ ಎರಡು ಅಗತ್ಯತೆಗಳನ್ನು ತಿಳಿಸಿ.
7) ಆರೋಗ್ಯ ಸೇವೆಯ ಎರಡು ಅಗತ್ಯತೆಗಳನ್ನು ತಿಳಿಸಿ.
8) ತಪಾಸಣಾ ಸೇವೆಯಲ್ಲಿ ಬಳಸುವ ಯಾವುದಾದರೂ ಎರಡು ಪರೀಕ್ಷೆಗಳನ್ನು ಹೆಸರಿಸಿ.
9) ಸಮಾಲೋಚನೆಯ ಯಾವುದೇ ಎರಡು ತಂತ್ರಗಳನ್ನು ಹೆಸರಿಸಿ.
10) ನಿರ್ದೇಶಿತ ಸಮಾಲೋಚನೆಯ ಎರಡು ಅನುಕೂಲಗಳನ್ನು ತಿಳಿಸಿ.
11) ಅನಿರ್ದೇಶಿತ ಸಮಾಲೋಚನೆಯ ಎರಡು ಅನುಕೂಲಗಳನ್ನು ತಿಳಿಸಿ.

**VI. ಐದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)**

1) ಮಾರ್ಗದರ್ಶನದ ಸ್ವರೂಪವನ್ನು ತಿಳಿಸಿ.
2) ಮಾರ್ಗದರ್ಶನದ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3) ಶೈಕ್ಷಣಿಕ ಮಾರ್ಗದರ್ಶನದ ಮಹತ್ವವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿ.
4) ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ವೃತ್ತಿ ಮಾರ್ಗದರ್ಶನವು ಹೇಗೆ ನೆರವಾಗುತ್ತದೆ?
5) ವೈಯಕ್ತಿಕ ಮಾರ್ಗದರ್ಶನದ ಮಹತ್ವವನ್ನು ಕುರಿತು ಬರೆಯಿರಿ.
6) ಸಮಾಲೋಚನೆಯ ಮಹತ್ವದ ಕುರಿತು ಒಂದು ಟಿಪ್ಪಣಿ ಬರೆಯಿರಿ.
7) ನಿರ್ದೇಶಿತ ಸಮಾಲೋಚನೆಯ ಅನುಕೂಲ-ಅನಾನುಕೂಲಗಳನ್ನು ಪಟ್ಟಿಮಾಡಿ.
8) ಅನಿರ್ದೇಶಿತ ಸಮಾಲೋಚನೆ ಅನುಕೂಲ-ಅನಾನುಕೂಲಗಳನ್ನು ತಿಳಿಸಿ.

# ಘಟಕ_8 : ಆರೋಗ್ಯ ಶಿಕ್ಷಣ

**I. ಬಹು ಆಯ್ಕೆ ಪ್ರಶ್ನೆಗಳು(ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)**

1. 'Health' ಶಬ್ದವು ಪ್ರಾಚೀನ ಇಂಗ್ಲೀಷಿನ Hale ಪದದಿಂದ ಬಂದಿದೆ. Hale ಪದದ ಅರ್ಥ
   a) Helpful b) Whole Sale c) Wholeness d) Where
2. ಶಾರೀರಿಕ ಆರೋಗ್ಯವಂತ ವ್ಯಕ್ತಿಯ ಒಂದು ಲಕ್ಷಣ
   a) ನಿರುತ್ಸಾಹ b) ಬೊಜ್ಜು c) ಪ್ರಶಾಂತ ನಿದ್ರೆ d) ಅಪೌಷ್ಟಿಕತೆ
3. ಇವುಗಳಲ್ಲಿ ವ್ಯಕ್ತಿಯ ಉತ್ತಮ ಶಾರೀರಿಕ ಆರೋಗ್ಯಕ್ಕೆ ಪೂರಕವಾದ ಅಂಶ
   a) ಶುಚಿತ್ವ b) ವಿರಮಿಸುವಿಕೆ c) ಸಮತೋಲನ ಆಹಾರ d) ಮೇಲಿನ ಎಲ್ಲವೂ
4. ವಸಡುಗಳ ಸಂರಕ್ಷಣೆ, ಸೂಕ್ಷ್ಮಾಣುಗಳಿಂದ ರಕ್ಷಣೆ, ಶುಭ್ರ ಉಡುಪುಗಳನ್ನು ಧರಿಸುವುದು ಇವುಗಳಿಗೆ ಸಂಬಂಧಿಸಿದೆ.
   a) ಶುಚಿತ್ವ b) ವ್ಯಾಯಾಮ c) ಪ್ರಾಣಾಯಾಮ d) ಉದ್ವೇಗ
5. ದೇಹದ ಬೆಳವಣಿಗೆ ಮತ್ತು ದುರಸ್ಥಿಗೆ ನೆರವಾಗುವ ಮುಖ್ಯ ಪೋಷಕಾಂಶಗಳು
   a) ಕೊಬ್ಬು b) ಕಾರ್ಬೋಹೈಡ್ರೇಟ್ಸ್ c) ಪ್ರೋಟೀನುಗಳು d) ಖನಿಜಾಂಶಗಳು
6. ವಿಟಮಿನ್ ಸಿ ಕೊರತೆಯಿಂದ ಉಂಟಾಗುವ ಕಾಯಿಲೆ
   a) ರಿಕೆಟ್ಸ್ b) ಬೆರಿಬೆರಿ c) ಗಳಗಂಡ d) ಸ್ಕರ್ವಿ
7. ವಿಟಮಿನ್ ಡಿ ಕೊರತೆಯಿಂದ ಉಂಟಾಗುವ ಕಾಯಿಲೆ
   a) ರಿಕೆಟ್ಸ್ b) ಬೆರಿಬೆರಿ c) ಇರುಳುಗಣ್ಣು d) ಸ್ಕರ್ವಿ
8. ದೇಹದಲ್ಲಿ ಥೈರಾಕ್ಸಿನ್ ಹಾರ್ಮೋನ್ ಉತ್ಪತ್ತಿಗೆ ಸಹಾಯಕವಾಗುವ ಖನಿಜಾಂಶ
   a) ಸೋಡಿಯಂ b) ಕಬ್ಬಿಣ c) ಅಯೋಡಿನ್ d) ಪೊಟ್ಯಾಶಿಯಂ

9. ಮಾನಸಿಕ ಆರೋಗ್ಯವಂತ ವ್ಯಕ್ತಿಗೆ ಸಂಬಂಧಿಸಿದಂತೆ ಇವುಗಳಲ್ಲಿ ತಪ್ಪಾದ ಗುಣಲಕ್ಷಣ-

a) ಆತ್ಮವಿಶ್ವಾಸ b) ಆತ್ಮತೃಪ್ತಿ c) ಮಾನಸಿಕ ಸ್ಥಿರತೆ d) ಅಪರಾಧ ಪ್ರಜ್ಞೆ

10. ಮಾನಸಿಕ ಆರೋಗ್ಯವನ್ನು ಉತ್ತೇಜಿಸುವ ಒಂದು ಅತ್ಯುತ್ತಮ ಮಾರ್ಗ

a) ಉದ್ವೇಗ b) ಆಶಾಭಂಗ c) ಒತ್ತಡ d) ಧ್ಯಾನ

11. “ರಾಷ್ಟ್ರದ ಆರೋಗ್ಯದ ಗುಟ್ಟು ಜನರ ಮನೆಗಳಲ್ಲಿ ಅಡಗಿದೆ” ಎಂದು ಫ್ಲಾರೆನ್ಸ್ ನೈಟಿಂಗೇಲ್‌ರವರು ಹೇಳಿದ್ದು ಇದರ ಮಹತ್ವ ಕುರಿತು -

a) ಆಧ್ಯಾತ್ಮಿಕ ಆರೋಗ್ಯ b) ಕೌಟುಂಬಿಕ ಆರೋಗ್ಯ c) ಸಾಮಾಜಿಕ ಆರೋಗ್ಯ d) ಪರಿಸರದ ಆರೋಗ್ಯ

12. ಆರೋಗ್ಯವಂತ ವ್ಯಕ್ತಿಯ ಹೃದಯ ಮಿಡಿತ ಸಾಮಾನ್ಯವಾಗಿ ಪ್ರತೀ ನಿಮಿಷಕ್ಕೆ_____ಇರುತ್ತದೆ.

a) 60-100 b) 30-60 c) 50-100 d) 100-160

13. ’ದೇಹದ ಶಕ್ತಿಯ ಮೂಲಗಳು’ ಎಂದು ಕರೆಯಲಾಗುವ ಪೋಷಕಾಂಶ

a) ಪೊಟ್ಯಾಶಿಯಂ b) ಲಿಪಿಡ್ಸ್ c) ಕಾರ್ಬೋಹೈಡ್ರೇಟ್ಸ್ d) ಸೋಡಿಯಂ

14. ಕರುಳಿನಲ್ಲಿ ಆಹಾರವು ಸುಲಭವಾಗಿ ಚಲಿಸಲು ಸಹಾಯಕವಾಗುವ ಪದಾರ್ಥ

a) ಕೊಬ್ಬಿನಾಂಶ b) ನಾರಿನಂಶ c) ಜೀವಸತ್ವ d) ಖನಿಜಾಂಶ

15. ಇವುಗಳಲ್ಲಿ ಮಾನಸಿಕ ಆರೋಗ್ಯದ ಅಡೆತಡೆಯನ್ನು ಗುರ್ತಿಸಿ.

a) ಉದ್ವೇಗ b) ಆಶಾಭಂಗ c) ಒತ್ತಡ d) ಮೇಲಿನ ಎಲ್ಲವೂ

16. 1936ರಲ್ಲಿ ‘ಒತ್ತಡ’ದ ಪರಿಕಲ್ಪನೆಯನ್ನು ಮೊದಲಿಗೆ ಪರಿಚಯಿಸಿದವರು

a) ಬ್ರೀವರ್ b) ಹ್ಯಾನ್ಸ್ ಸ್ಯಾಲ್ಯೆ c) ಕ್ರೋವೆನ್ಸ್ d) ಬಂಡೂರಾ

17. ’ಯೋಗ ಸೂತ್ರ” ಎಂಬ ಗ್ರಂಥವನ್ನು ರಚಿಸಿದ ಭಾರತೀಯ ದಾರ್ಶನಿಕ

a) ಚರಕ b) ಪತಂಜಲಿ c) ಚಾಣಕ್ಯ d) ವಿಶ್ವಾಮಿತ್ರ

18. ಅಪೌಷ್ಠಿಕತೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ

I. ಆಹಾರದ ಸೇವನೆಯ ಕೊರತೆ II. ಆಹಾರ ಶುಚಿತ್ವದ ಕೊರತೆ III. ಆಹಾರದ ಬೆಲೆ ಏರಿಕೆ IV. ಅಜೀರ್ಣದ ಸಮಸ್ಯೆ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಅಪೌಷ್ಟಿಕತೆಗೆ ಸರಿಯಾದ ಕಾರಣಗಳನ್ನು ಗುರುತಿಸಿ.

a) I & II ಮಾತ್ರ ಸರಿ c) III ಮಾತ್ರ ಸರಿ

b) II & III ಮಾತ್ರ ಸರಿ d) I, II, III & IV ಸರಿ

## II. ಹೊಂದಿಸಿ ಬರೆಯಿರಿ

| | A | B |
|---|---|---|
| 1) | ಕಾರ್ಬೋಹೈಡ್ರೇಟ್ಸ್ | - ಶಕ್ತಿಯ ಮೂಲಗಳು |
| 2) | ವಿಟಮಿನ್ ಡಿ ಮೂಲ | - ಸೂರ್ಯನ ಬೆಳಕು |
| 3) | ಕಬ್ಬಿಣಾಂಶದ ಕೊರತೆ | - ರಕ್ತಹೀನತೆ |
| 4) | ಅಪೌಷ್ಠಿಕತೆ | - ಪೋಷಕಾಂಶಗಳ ಕೊರತೆ |
| 5) | ಯೋಗ ಎಂದರೆ | - ಇಂದ್ರಿಯ ನಿಗ್ರಹ |
| 6) | ಧ್ಯಾನ ಎಂದರೆ | - ಚಿಂತನೆ ಮಾಡು |
| 7) | ಪ್ರಾಣಾಯಾಮ | - ಉಸಿರಿನ ವಿಸ್ತಾರ |
| 8) | ಯೋಗಸೂತ್ರ ಗ್ರಂಥ | - ಪತಂಜಲಿ |
| 9) | ವಸುದುಗಳ ರಕ್ಷಣೆ | - ಶುಚಿತ್ವದ ವಿಧಾನ |
| 10) | ಮಾನಸಿಕ ವೇದನೆಯ ಸ್ಥಿತಿ | - ಒತ್ತಡ |
| 11) | ಇರುಳುಗಣ್ಣು ರೋಗ | - ವಿಟಮಿನ್ ಎ ಕೊರತೆ |
| 12) | ಬೆರಿಬೆರಿ ರೋಗ | - ವಿಟಮಿನ್ ಬಿ ಕೊರತೆ |
| 13) | ಸ್ಕರ್ವಿ ರೋಗ | - ವಿಟಮಿನ್ ಸಿ ಕೊರತೆ |
| 14) | ರಿಕೆಟ್ಸ್ ರೋಗ | - ವಿಟಮಿನ್ ಡಿ ಕೊರತೆ |
| 15) | ಸಾರ್ವತ್ರಿಕ ದ್ರಾವಣ | - ನೀರು |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಆರೋಗ್ಯ, ವಿರಮಿಸುವಿಕೆಗೆ, ಗಳಗಂಡ, 70-120, ಸಮತೋಲನ ಆಹಾರ, ಅಪೌಷ್ಠಿಕತೆ, ಲಿಪಿಡ್ಸ್, ಜೀವಸತ್ವ ಸಿ, ವಿಟಮಿನ್ ಕೆ, ಉದ್ವೇಗ, ಕಠೋಪನಿಷತ್, ಪ್ರಾಣಾಯಾಮ)

1) ದೇಹ ಮತ್ತು ಮನಸ್ಸು ಸ್ವಾಸ್ಥ್ಯದಿಂದ ಕೂಡಿರುವುದಕ್ಕೆ_______ಎನ್ನುತ್ತೇವೆ.
2) ತಂಪು ಪಾನೀಯ ಸೇವನೆ, ಸಂಗೀತ ಆಲಿಸುವುದು ಈ ತಂತ್ರಗಳು_________ಗೆ ಸಹಾಯಕ.
3) ದೇಹದಲ್ಲಿ ಆಯೋಡಿನ್ ಕೊರತೆಯಿಂದ ಉಂಟಾಗುವ ಕಾಯಿಲೆ_______
4) ಆರೋಗ್ಯವಂತ ವ್ಯಕ್ತಿಯ ರಕ್ತದಲ್ಲಿ ಸಾಮಾನ್ಯವಾಗಿ ಸಕ್ಕರೆಯ ಪ್ರಮಾಣ ______ ಇರುತ್ತದೆ.
5) ಅತ್ಯವಶ್ಯಕ ಪೋಷಕಾಂಶಗಳು ಅಗತ್ಯ ಪ್ರಮಾಣದಲ್ಲಿರುವ ಆಹಾರವನ್ನು _______ಎನ್ನುತ್ತೇವೆ.
6) ಪೌಷ್ಠಿಕಾಂಶಗಳ ಕೊರತೆ, ಅಸಮತೋಲನ ಪೌಷ್ಠಿಕಾಂಶಗಳ ಬಳಕೆಯೇ______
7) ಕೊಬ್ಬು ಮತ್ತು ಎಣ್ಣೆಯ ಅಂಶಗಳನ್ನು ಹೊಂದಿರುವ ಪದಾರ್ಥಗಳನ್ನು______ಎಂದು ಕರೆಯುವರು.
8) ಹುಳಿಯಿರುವ ಹಣ್ಣು ಮತ್ತು ತರಕಾರಿಗಳಲ್ಲಿ ಕಂಡುಬರುವ ಜೀವಸತ್ವ_____
9) ನಮ್ಮ ದೇಹದಲ್ಲಿ ರಕ್ತ ಹೆಪ್ಪುಗಟ್ಟಲು ಅತ್ಯಂತ ಅವಶ್ಯಕವಾಗಿ ಬೇಕಾಗಿರುವ ಜೀವಸತ್ವ_____
10) ಮಾನಸಿಕ, ಭಾವನಾತ್ಮಕ ಹಾಗೂ ನರಮಂಡಲದ ಅಸ್ಥಿರ ಸ್ಥಿತಿಯನ್ನು______ಎನ್ನುತ್ತೇವೆ.
11) 'ಯೋಗ' ಎಂಬ ಪದ ಮೊದಲ ಬಾರಿಗೆ ಉಕ್ತವಾಗಿರುವ ಭಾರತದ ಹಿಂದೂ ಗ್ರಂಥ______
12) ಉಚ್ಛ್ವಾಸ ಮತ್ತು ನಿಶ್ವಾಸವನ್ನು ವ್ಯವಸ್ಥಿತವಾಗಿ ನಿಯಂತ್ರಿಸುವ ಕ್ರಿಯೆಗೆ_______ಎನ್ನುವರು.

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಆರೋಗ್ಯ ಎಂದರೇನು?
2) ಆರೋಗ್ಯ ಶಿಕ್ಷಣದ ಅರ್ಥವನ್ನು ಬರೆಯಿರಿ.
3) ವಿರಮಿಸುವಿಕೆ ಎಂದರೇನು?
4) ಸಮತೋಲನ ಆಹಾರ ಎಂದರೇನು?
5) 'ಅಪೌಷ್ಠಿಕತೆ' ಪದವನ್ನು ವ್ಯಾಖ್ಯಾನಿಸಿ.
6) ಮಾನಸಿಕ ಆರೋಗ್ಯ ಎಂದರೇನು?
7) ಉದ್ವೇಗ ಎಂದರೇನು?
8) ಮನೋವೈಫಲ್ಯದ ಅರ್ಥವೇನು?
9) ಒತ್ತಡ ಎಂದರೇನು?
10) ಯೋಗ ಪದದ ಅರ್ಥವೇನು?
11) ಧ್ಯಾನ ಎಂದರೇನು?
12) ಪ್ರಾಣಾಯಾಮದ ಅರ್ಥವನ್ನು ಬರೆಯಿರಿ.

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಆರೋಗ್ಯದ ಎರಡು ಆಯಾಮಗಳನ್ನು ಹೆಸರಿಸಿ.
2) ಆರೋಗ್ಯ ಶಿಕ್ಷಣದ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
3) ದೇಹದ ಶುಚಿತ್ವದ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
4) ದೇಹದ ಶುಚಿತ್ವವನ್ನು ಕಾಪಾಡುವ ಎರಡು ವಿಧಾನಗಳನ್ನು ಬರೆಯಿರಿ.
5) ಸಮತೋಲನ ಆಹಾರದಲ್ಲಿರಬೇಕಾದ ಎರಡು ಪ್ರಮುಖ ಪೌಷ್ಠಿಕಾಂಶಗಳನ್ನು ಹೆಸರಿಸಿ.
6) ವಿರಮಿಸುವಿಕೆಯ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
7) ವಿರಮಿಸುವಿಕೆಯ ಯಾವುದೇ ಎರಡು ತಂತ್ರಗಳನ್ನು ಬರೆಯಿರಿ.
8) ದೈಹಿಕ ವ್ಯಾಯಾಮದ ಎರಡು ಅನುಕೂಲಗಳಾವುವು?
9) ಮಾನಸಿಕ ಆರೋಗ್ಯದ ಎರಡು ಅಡೆತಡೆಗಳನ್ನು ತಿಳಿಸಿ.
10) ಯೋಗದ ಯಾವುದೇ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
11) ಧ್ಯಾನದ ಯಾವುದೇ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
12) ಪ್ರಾಣಾಯಾಮದಿಂದಾಗುವ ಎರಡು ಪ್ರಾಮುಖ್ಯತೆಯನ್ನು ಬರೆಯಿರಿ.
13) ಯಾವುದೇ ಎರಡು ಜೀವಸತ್ವಗಳನ್ನು ಹೆಸರಿಸಿ.
14) ಲಿಪಿಡ್ಸ್ ಎಂದರೇನು? ಒಂದು ಉದಾಹರಣೆ ಕೊಡಿ.
15) ಕಾರ್ಬೋಹೈಡ್ರೇಟ್ಸ್ ಅಂಶವು ಸಮೃದ್ಧವಾಗಿರುವ ಎರಡು ಧಾನ್ಯಗಳನ್ನು ಹೆಸರಿಸಿ.
16) ನೀರಿನಿಂದಾಗುವ ಯಾವುದೇ ಎರಡು ಪ್ರಯೋಜನಗಳನ್ನು ಬರೆಯಿರಿ.
17) ಅಪೌಷ್ಠಿಕತೆಗೆ ಯಾವುದೇ ಎರಡು ಕಾರಣಗಳನ್ನು ಬರೆಯಿರಿ.

**VI. ಹತ್ತು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 35-40 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಆರೋಗ್ಯದ ವಿವಿಧ ಆಯಾಮಗಳನ್ನು ಕುರಿತು ವಿಶ್ಲೇಷಿಸಿ.
2) ಶಾರೀರಿಕ ಆರೋಗ್ಯವಂತ ವ್ಯಕ್ತಿಯ ಲಕ್ಷಣಗಳನ್ನು ಪಟ್ಟಿಮಾಡಿ.
3) ದೈಹಿಕ ಆರೋಗ್ಯದ ರಕ್ಷಣೆಯಲ್ಲಿ ಶುಚಿತ್ವದ ಪಾತ್ರವನ್ನು ವಿವರಿಸಿ.
4) ದೈಹಿಕ ಆರೋಗ್ಯದ ರಕ್ಷಣೆಯಲ್ಲಿ ವಿರಮಿಸುವಿಕೆ ಮತ್ತು ವ್ಯಾಯಾಮದ ಪಾತ್ರವೇನು?
5) ಯಾವುದೇ 5 ಜೀವಸತ್ವಗಳು, ಅವುಗಳ ಆಕರಗಳು ಮತ್ತು ಕೊರತೆಯ ಪರಿಣಾಮಗಳನ್ನು ಕೋಷ್ಟಕ ರೂಪದಲ್ಲಿ ಮಾರ್ಪಡಿಸಿ.
6) ಅಪೌಷ್ಠಿಕತೆಗೆ ಕಾರಣ, ಪರಿಣಾಮಗಳನ್ನು ತಿಳಿಸಿ. ಅಪೌಷ್ಠಿಕತೆಯ ನಿವಾರಣೋಪಾಯಗಳನ್ನು ಸೂಚಿಸಿರಿ.
7) ಮಾನಸಿಕ ಆರೋಗ್ಯವಂತ ವ್ಯಕ್ತಿಯ ಲಕ್ಷಣಗಳನ್ನು ಪಟ್ಟಿಮಾಡಿರಿ.
8) ಮಾನಸಿಕ ಆರೋಗ್ಯವನ್ನು ಉತ್ತೇಜಿಸುವಲ್ಲಿ ಯೋಗ ಮತ್ತು ಧ್ಯಾನಗಳ ಮಹತ್ವವನ್ನು ವಿಶ್ಲೇಷಿಸಿ.
9) ಮಾನಸಿಕ ಆರೋಗ್ಯವನ್ನು ಉತ್ತೇಜಿಸುವಲ್ಲಿ ಪ್ರಾಣಾಯಾಮದ ಮಹತ್ವವನ್ನು ವಿಶ್ಲೇಷಿಸಿ.

## ಘಟಕ_9 : ಮೌಲ್ಯಾಧಾರಿತ ಶಿಕ್ಷಣ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. ವ್ಯಕ್ತಿಯು ತನ್ನ ಸಾಮರ್ಥ್ಯ ಮತ್ತು ಚಾರಿತ್ರ್ಯದ ಬಗ್ಗೆ ತೃಪ್ತಿಯ ಭಾವನೆ ಹೊಂದಿರುವುದನ್ನು______ಎನ್ನುವರು.
   a) ನೈತಿಕತೆ b) ಕಾರ್ಯತತ್ಪರತೆ c) ಸ್ವನಿಯಂತ್ರಣ d) ಆತ್ಮಾಭಿಮಾನ
2. ಇವುಗಳಲ್ಲಿ ವೈಯಕ್ತಿಕ ಮೌಲ್ಯವನ್ನು ಗುರುತಿಸಿ.
   a) ಶಿಸ್ತು b) ನೈತಿಕತೆ c) ಸರಳ ಜೀವನ d) ಮೇಲಿನ ಎಲ್ಲವೂ
3. ನಿಧಾನ ಮಾಡದೇ, ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುವ ಗುಣಸ್ವಭಾವಕ್ಕೆ______ಎನ್ನುವರು.
   a) ಶಿಸ್ತು b) ಆಧ್ಯಾತ್ಮಿಕ c) ಉದ್ಯೋಗಶೀಲತೆ d) ಕಾರ್ಯತತ್ಪರತೆ
4. ಇವುಗಳಲ್ಲಿ ಸಾಮಾಜಿಕ ಮೌಲ್ಯವನ್ನು ಗುರುತಿಸಿ.
   a) ಸಹಿಷ್ಣುತೆ b) ಶಿಸ್ತು c) ಉದ್ಯೋಗಶೀಲತೆ d) ಆತ್ಮಾಭಿಮಾನ
5. Democracy ಪದದ ಅರ್ಥ
   a) ಅಧಿಕಾರಶಾಹಿ b) ನಿರಂಕುಶ ಪ್ರಭುತ್ವ c) ಜನರ ಶಕ್ತಿ d) ಸಾಮ್ರಾಜ್ಯಶಾಹಿ
6. ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಸಂಬಂಧಿಸಿದಂತೆ ತಪ್ಪಾದುದ್ದನ್ನು ಗುರುತಿಸಿ.
   a) ಸ್ವಾತಂತ್ರ್ಯ b) ಸಮಾನತೆ c) ಜವಾಬ್ದಾರಿ d) ಅಹಿಂಸೆ
7. "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ" ಎಂಬ ವ್ಯಾಖ್ಯೆ ನೀಡಿದವರು_
   a) ರೂಸ್‌ವೆಲ್ಟ್ b) ಅಬ್ರಹಾಂ ಲಿಂಕನ್ c) ಜಾಕಬ್ ವೈನರ್ d) ಅಂಬೇಡ್ಕರ್
8. 'ಧೃ' ಎಂಬ ಸಂಸ್ಕೃತ ಧಾತುವಿನಿಂದ ಉಗಮವಾಗಿರುವ ಮತ್ತು 'ಧರಿಸು, ರಕ್ಷಿಸು, ಎತ್ತಿಹಿಡಿ' ಎಂಬ ಅರ್ಥ ಕೊಡುವ ಶಬ್ದ-
   a) ಧರ್ಮ b) ಅರ್ಥ c) ಕಾಮ d) ಮೋಕ್ಷ
9. ಬಿಡುಗಡೆ, ಆತ್ಮಸಾಕ್ಷಾತ್ಕಾರ, ಶ್ರೇಯಸ್ಸು ಎಂಬ ಪರ್ಯಾಯ ಅರ್ಥಗಳನ್ನು ಹೊಂದಿರುವ ಶಬ್ದ
   a) ಧರ್ಮ b) ನ್ಯಾಯ c) ಮೋಕ್ಷ d) ಕಾಮ
10. 'ಆತ್ಮ ಸಾಕ್ಷಾತ್ಕಾರದ ಮೆಟ್ಟಿಲುಗಳು' ಎಂದು ಕರೆಯಲ್ಪಡುವ ಪದವನ್ನು ಗುರ್ತಿಸಿ.
    a) ವೇದಗಳು b) ಪುರುಷಾರ್ಥಗಳು c) ಪಂಚಕೋಶಗಳು d) ಕಾವ್ಯಗಳು
11. ಲಾಲ್ ಬಹದ್ದೂರ್ ಶಾಸ್ತ್ರೀಯವರು ಪ್ರಧಾನಿಯಾಗಿದ್ದಾಗ ಒಮ್ಮೆ ರೈಲಿನಲ್ಲಿ ಪ್ರಯಾಣಿಸುತ್ತಾರೆ. ದುಬಾರಿ ಬೆಲೆಯ ಪ್ರಥಮ ದರ್ಜೆ ರೈಲು ಟಿಕೆಟ್‌ನ್ನು ಪಡೆದು ಪ್ರಯಾಣಿಸುವ ಸಮರ್ಥರಿದ್ದರೂ ಸಹ ಅವರು ಹಾಗೆ ಮಾಡದೆ ಸಾಮಾನ್ಯ ದರ್ಜೆಯ ಸೀಟಿನಲ್ಲಿ ಪ್ರಯಾಣ ಮಾಡುತ್ತಾರೆ? ಹಾಗಿದ್ದರೆ ಶಾಸ್ತ್ರೀಜಿಯವರ ಈ ಮನೋಭಾವದ ಮೌಲ್ಯವನ್ನು ಕಂಡುಹಿಡಿಯಿರಿ.
    a) ಸರಳ ಜೀವನ b) ಉದ್ಯೋಗಶೀಲತೆ c) ಕಾರ್ಯಕ್ಷಮತೆ d) ಆಧ್ಯಾತ್ಮಿಕತೆ

12. ವೈಜ್ಞಾನಿಕ ಮನೋಧರ್ಮವು ಈ ಕೆಳಗಿನ ವಿಧಾನಗಳನ್ನು ಒಳಗೊಂಡಿದೆ-

1. ಕ್ರಮಬದ್ಧ ವೀಕ್ಷಣೆ
2. ಅರ್ಥವಿವರಣೆ
3. ತರ್ಕಬದ್ಧ ವಿಚಾರಗಳ ಅನ್ವಯ
4. ಸಂಶೋಧನಾ ಪ್ರವೃತ್ತಿ

a) 1 ಮತ್ತು 2 ಮಾತ್ರ ಸರಿಯಾಗಿದೆ
b) 1 ಮತ್ತು 4 ಮಾತ್ರ ಸರಿಯಾಗಿದೆ
c) 1, 2 ಮತ್ತು 4 ಮಾತ್ರ ಸರಿಯಾಗಿದೆ
d) 1,2,3 ಮತ್ತು 4 ಸರಿಯಾಗಿದೆ

13. ಪ್ರಾಯೋಗಿಕ ವಿಚಾರಗಳ ಆಧಾರದ ಮೇಲೆ ಸತ್ಯವನ್ನು ಪ್ರತಿಪಾದಿಸಲು ಪರಿಗಣಿಸಲಾದ ಮೌಲ್ಯ-

a) ನೈತಿಕತೆ b) ಸರಳ ಜೀವನ c) ವೈಜ್ಞಾನಿಕ ಮನೋಧರ್ಮ d) ಶಿಸ್ತು

14. ಪುರುಷಾರ್ಥ ಸಿದ್ಧಾಂತದ ಪ್ರಕಾರ ಮಾನವ ಜೀವನದ ಅಂತಿಮ ಗುರಿ.

a) ಧರ್ಮ ಪರಿಪಾಲನೆ
b) ಯಶಸ್ಸು ಸಾಧಿಸುವುದು
c) ಮೋಕ್ಷ ಪಡೆಯುವುದು
d) ಆಸೆಗಳನ್ನು ಈಡೇರಿಸಿಕೊಳ್ಳುವುದು

## II. ಹೊಂದಿಸಿ ಬರೆಯಿರಿ

| | A | B |
|---|---|---|
| 1) | ಶಿಸ್ತು | - ನಿಯಮಪಾಲನೆ |
| 2) | ತಾರ್ಕಿಕ ಆಲೋಚನೆ | - ವೈಜ್ಞಾನಿಕ ಮನೋಧರ್ಮ |
| 3) | ಮೋಕ್ಷ ಎಂದರೆ | - ಬಿಡುಗಡೆ |
| 4) | ಸ್ವಾತಂತ್ರ್ಯ | - ಪ್ರಜಾಸತ್ತಾತ್ಮಕ ಮೌಲ್ಯ |
| 5) | Demos + Kratia ಅರ್ಥ | - ಜನರ ಶಕ್ತಿ |
| 6) | ಅಹಿಂಸೆಯೆಂಬುದು | - ಪರಮ ಧರ್ಮ |
| 7) | ಅನ್ನಮಯ | - ಪಂಚಕೋಶ |
| 8) | ಪಂಚಕೋಶಗಳು | - ಆತ್ಮಸಾಕ್ಷಾತ್ಕಾರದ ಮೆಟ್ಟಿಲುಗಳು |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಶಿಸ್ತು, ಆತ್ಮಾಭಿಮಾನ, ಹೊಲಿಡೇಕ್, ಸರಳ ಜೀವನ, ಗಾಂಧೀಜಿ, ಜೀವಿಸುವ ಹಕ್ಕು, ಆಧ್ಯಾತ್ಮಿಕತೆ, ಅಹಿಂಸೆ, ಕಾಮ, ವಾದ)

1) ವಿಧೇಯತೆ, ಸ್ವನಿಯಂತ್ರಣ ಮತ್ತು ತರಬೇತಿಯಾಗಿದ್ದು ಕ್ರಮಬದ್ಧತೆ ತರುವ ಮೌಲ್ಯ______
2) ತನ್ನ ತನದ ಬಗ್ಗೆ ಇರುವ ಉತ್ತಮ ಅಭಿಪ್ರಾಯವೇ______
3) 'Secularism' ಎಂಬ ಪದವನ್ನು ಮೊದಲ ಬಾರಿಗೆ ಬಳಸಿದವರು______
4) ಆಡಂಬರದ ಮತ್ತು ಐಷಾರಾಮಿ ಜೀವನದಿಂದ ದೂರವಾಗಿ, ಸಾಮಾನ್ಯವಾಗಿ ಬದುಕುವ ರೀತಿಗೆ_____ಎನ್ನುವರು.
5) ತಮ್ಮ ಜೀವನದಲ್ಲಿ 'ಸರಳತೆ' ಎಂಬ ಮೌಲ್ಯವನ್ನು ಅನ್ವಯಿಸಿಕೊಂಡು ಮಾದರಿಯಾದ ವ್ಯಕ್ತಿ______
6) 'ನೀನು ಬದುಕು, ಮತ್ತೊಬ್ಬನನ್ನು ಬದುಕಲು ಬಿಡು' ಎಂದು ಪ್ರತಿಪಾದಿಸುವ ಪ್ರಜಾಸತ್ತಾತ್ಮಕ ಮೌಲ್ಯ______
7) ಆತ್ಮದ ಅರಿವು ಮತ್ತು ಆತ್ಮ ಸಾಕ್ಷಾತ್ಕಾರದ ಬಗ್ಗೆ ತಿಳಿಸುವ ಮೌಲ್ಯ____
8) ಮನುಷ್ಯ, ಪ್ರಾಣಿ-ಪಕ್ಷಿ, ಪರಿಸರದಲ್ಲಿ ಕ್ರೂರತ್ವ ಮಾಡದೇ ಇರುವ ಶ್ರೇಷ್ಠ ಮೌಲ್ಯ_____
9) ಮಾನವನ ಬಯಕೆಗಳು ಮತ್ತು ಆಕಾಂಕ್ಷೆಗಳನ್ನು ______ಎನ್ನುವರು.
10) ವೈಜ್ಞಾನಿಕ ಮನೋಧರ್ಮದ ಪ್ರಮುಖ ಮೂರು ಅಂಶಗಳಲ್ಲಿ ಚರ್ಚೆ, ವಿಶ್ಲೇಷಣೆ ಮತ್ತು_______

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಮೌಲ್ಯ ಪದವನ್ನು ವ್ಯಾಖ್ಯಾನಿಸಿ.
2) ಆತ್ಮಾಭಿಮಾನ ಎಂದರೇನು?
3) ಶಿಸ್ತಿನ ಅರ್ಥವನ್ನು ಬರೆಯಿರಿ.
4) ಕಾರ್ಯತತ್ಪರತೆ ಎಂದರೇನು?
5) ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸಿ.
6) ಅಹಿಂಸೆಯ ಅರ್ಥವನ್ನು ತಿಳಿಸಿ.
7) ಸಹಿಷ್ಣುತೆ ಎಂದರೇನು?
8) ವೈಜ್ಞಾನಿಕ ಮನೋಧರ್ಮ ಎಂದರೇನು?
9) ಧರ್ಮ ಪದದ ನಿಷ್ಪತ್ತಿ ಬರೆಯಿರಿ.
10) ಮೋಕ್ಷದ ಅರ್ಥ ತಿಳಿಸಿ.

**V. ಎರಡು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ವೈಯಕ್ತಿಕ ಮೌಲ್ಯಗಳಲ್ಲಿ ಎರಡನ್ನು ಹೆಸರಿಸಿ.
2) ಸಾಮಾಜಿಕ ಮೌಲ್ಯಗಳಲ್ಲಿ ಎರಡನ್ನು ಹೆಸರಿಸಿ.
3) ಆತ್ಮಾಭಿಮಾನದ ಎರಡು ಮಹತ್ವ ತಿಳಿಸಿ.
4) ಶಿಸ್ತಿನ ಯಾವುದೇ ಎರಡು ಪ್ರಾಮುಖ್ಯತೆಯನ್ನು ಬರೆಯಿರಿ.
5) ಸರಳ ಜೀವನದ ಯಾವುದೇ ಎರಡು ಮಹತ್ವ ತಿಳಿಸಿ.
6) ಉದ್ಯೋಗಶೀಲತೆಯ ಎರಡು ಪ್ರಾಮುಖ್ಯತೆಯನ್ನು ಬರೆಯಿರಿ.
7) ನೈತಿಕ ಮೌಲ್ಯದ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
8) ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ಎರಡನ್ನು ಹೆಸರಿಸಿ.
9) ವೈಜ್ಞಾನಿಕ ಮನೋಧರ್ಮದ ಎರಡು ಪ್ರಾಮುಖ್ಯತೆಯನ್ನು ತಿಳಿಸಿ.
10) ಪುರುಷಾರ್ಥಗಳಲ್ಲಿ ಯಾವುದಾದರೂ ಎರಡನ್ನು ಹೆಸರಿಸಿ.
11) ಮೋಕ್ಷ ಸಂಪಾದನೆಯ ಯಾವುದಾದರೂ ಎರಡು ಮಾರ್ಗಗಳನ್ನು ಹೆಸರಿಸಿ.
12) ಪಂಚಕೋಶಗಳಲ್ಲಿ ಯಾವುದಾದರೂ ಎರಡನ್ನು ಹೆಸರಿಸಿ.

**VI. ಐದು ಅಂಕದ ಪ್ರಶ್ನೆಗಳು** (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15-20 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಮೌಲ್ಯಗಳ ಪ್ರಾಮುಖ್ಯತೆಯನ್ನು ಬರೆಯಿರಿ.
2) ವೈಯಕ್ತಿಕ ಮೌಲ್ಯಗಳಲ್ಲಿ ಯಾವುದಾದರೂ ಎರಡರ ಪ್ರಾಮುಖ್ಯತೆಯನ್ನು ವಿವರಿಸಿ.
3) ಸಾಮಾಜಿಕ ಮೌಲ್ಯಗಳಲ್ಲಿ ಯಾವುದಾದರೂ ಎರಡರ ಪ್ರಾಮುಖ್ಯತೆಯನ್ನು ವಿಶ್ಲೇಷಿಸಿ.
4) ಪ್ರಜಾಪ್ರಭುತ್ವ ಮೌಲ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5) ಪುರುಷಾರ್ಥ ಸಿದ್ಧಾಂತವನ್ನು ಚಿತ್ರದೊಂದಿಗೆ ವರ್ಣಿಸಿ.
6) ಪಂಚಕೋಶ ಸಿದ್ಧಾಂತದ ಕುರಿತು ಕಿರು ಟಿಪ್ಪಣಿ ಬರೆಯಿರಿ.
7) ಸಮಾಜದಲ್ಲಿ ಮಕ್ಕಳನ್ನು ಮೌಲ್ಯಯುತ ವ್ಯಕ್ತಿಗಳನ್ನಾಗಿ ಬೆಳೆಸುವಲ್ಲಿ ಶಿಕ್ಷಣದ ಪಾತ್ರವೇನು?

## ಘಟಕ_10 : ಪರಿಸರ ಶಿಕ್ಷಣ

**I. ಬಹು ಆಯ್ಕೆ ಪ್ರಶ್ನೆಗಳು** (ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಬೇಕು)

1. ಸಸ್ಯಗಳು, ಪ್ರಾಣಿ-ಪಕ್ಷಿಗಳು, ಸೂಕ್ಷ್ಮಾಣು ಜೀವಿಗಳನ್ನು ಒಳಗೊಂಡ ಪರಿಸರ
   a) ಕೃತಕ ಪರಿಸರ b) ಮಾನವ ನಿರ್ಮಿತ ಪರಿಸರ c) ಜೈವಿಕ ಪರಿಸರ d) ಅಜೈವಿಕ ಪರಿಸರ
2. ಇವುಗಳಲ್ಲಿ ಅಜೈವಿಕ ಪರಿಸರಕ್ಕೆ ಒಂದು ಸೂಕ್ತ ಉದಾಹರಣೆ
   a) ಬ್ಯಾಕ್ಟೀರಿಯಾ b) ಜಲಚರಗಳು c) ಸರೋವರಗಳು d) ಪಕ್ಷಿಗಳು
3. ಪರಿಸರ ವಿನಾಶದ ಪ್ರಮುಖ ನಿದರ್ಶನಗಳೆಂದರೆ
   a) ಓಝೋನ್ ಪದರ ವಿನಾಶ c) ಜಾಗತಿಕ ತಾಪಮಾನ
   b) ಹಸಿರು ಮನೆ ಪರಿಣಾಮ d) ಈ ಎಲ್ಲವೂ ಸರಿಯಿದೆ
4. ಪರಿಸರ ವಿನಾಶಕ್ಕೆ ಕಾರಣವಾಗುವ ಸಾಮಾಜಿಕ ಅಂಶ
   a) ಬಡತನ b) ನಗರೀಕರಣ c) ಆಧುನೀಕರಣ d) ಎಲ್ಲವೂ ಸರಿಯಿದೆ
5. UNFPA ಸಂಸ್ಥೆಯ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ ನಿಮಿಷಕ್ಕೆ ಜನಿಸುವ ಶಿಶುಗಳ ಸಂಖ್ಯೆ
   a) 40 b) 50 c) 60 d) 100
6. ಇವುಗಳಲ್ಲಿ ಪರಿಸರದ ಮಾಲಿನ್ಯವನ್ನು ಗುರುತಿಸಿ.
   a) ಜಲ ಮಾಲಿನ್ಯ b) ವಾಯು ಮಾಲಿನ್ಯ c) ಶಬ್ಧ ಮಾಲಿನ್ಯ d) ಎಲ್ಲವೂ ಸೇರಿದೆ
7. ನೈಸರ್ಗಿಕ ಸಂಪನ್ಮೂಲಗಳ ವಿಧಗಳಿಗೆ ಸಂಬಂಧಿಸಿದಂತೆ ತಪ್ಪಾದುದ್ದನ್ನು ಗುರ್ತಿಸಿ.
   a) ಜಲ ಸಂಪನ್ಮೂಲ b) ಅರಣ್ಯ ಸಂಪನ್ಮೂಲ c) ಶಕ್ತಿ ಸಂಪನ್ಮೂಲ d) ಹಣ ಸಂಪನ್ಮೂಲ

8. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ 4 R's ಗಳಲ್ಲಿ ತಪ್ಪಾದುದ್ದನ್ನು ಗುರ್ತಿಸಿ.

a) ಮಿತಬಳಕೆ b) ನಿರಾಕರಣೆ c) ಪುನರ್ ಚಕ್ರೀಕರಣ d) ವಿಚಾರಣೆ

9. ಇವುಗಳಲ್ಲಿ ಪರಿಸರ ಸಂರಕ್ಷಣೆ ಮಾಡುವ ಒಂದು ಸೂಕ್ತ ಕ್ರಮವನ್ನು ಗುರುತಿಸಿ.

a) ರಿಫ್ರೀಜರೇಟರ್ ಬಳಸುವುದು c) ಸೋಲಾರ್ ವಾಟರ್ ಹೀಟರ್ ಬಳಸುವುದು

b) ಏರ್ ಕಂಡೀಶನರ್ ಬಳಸುವುದು d) ಪ್ಲಾಸ್ಟಿಕ್ ಚೀಲ ಉಪಯೋಗಿಸುವುದು

10. ಪ್ರಕೃತಿ ನಡಿಗೆಯಿಂದ ಉಂಟಾಗುವ ಅನುಕೂಲಗಳು

a) ಆಮ್ಲ ಜನಕ ಸೇವನೆ c) ಮಾನಸಿಕ ಒತ್ತಡ ನಿವಾರಣೆ

b) ಪ್ರಕೃತಿ ಸೌಂದರ್ಯ ಆಸ್ವಾದನೆ d) ಮೇಲಿನ ಎಲ್ಲವೂ ಸರಿಯಿದೆ.

11. ಇವುಗಳಲ್ಲಿ ಪರಿಸರ ಕೂಟದ ಚಟುವಟಿಕೆಗಳು

a) ಪರಿಸರದ ಸಮಸ್ಯೆಗಳ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು

b) ಪರಿಸರ ಸಂಬಂಧಿತ ದಿನಾಚರಣೆಗಳನ್ನು ಸಂಘಟಿಸುವುದು

c) ಮಳೆ ನೀರು ಕೊಯಿಲು ಯೋಜನೆಗಳನ್ನು ಅನುಷ್ಠಾನಗೊಳಿಸುವುದು

d) ಈ ಮೇಲಿನ ಎಲ್ಲವೂ

12. ಪ್ಲಾಸ್ಟಿಕ್‌ನ ಚೀಲಗಳನ್ನು ಬಳಸದೇ ಇರುವುದು ಇದಕ್ಕೆ ಉದಾಹರಣೆಯಾಗಿದೆ.

a) ಮಿತ ಬಳಕೆ b) ಪುನರ್ ಬಳಕೆ c) ಪುನರ್ ಚಕ್ರೀಕರಣ d) ನಿರಾಕರಣೆ

13. ಹಳೆಯ ಪ್ಲಾಸ್ಟಿಕ್ ಬಾಟಲಿಗಳನ್ನು ಕರಗಿಸಿ ಹೊಸ ಬಾಟಲಿಗಳನ್ನು ತಯಾರಿಸುವುದು ಇದಕ್ಕೆ ಉದಾಹರಣೆಯಾಗಿದೆ.

a) ಮಿತ ಬಳಕೆ b) ಪುನರ್ ಬಳಕೆ c) ಪುನರ್ ಚಕ್ರೀಕರಣ d) ನಿರಾಕರಣೆ

14. ಇವುಗಳಲ್ಲಿ ಪುನರ್ ಚಕ್ರೀಕರಣ ಪ್ರಕ್ರಿಯೆಗೆ ಒಳಪಡಿಸಲು ಸಾಧ್ಯವಾಗದ ವಸ್ತು

a) ಪೆಟ್ರೋಲಿಯಂ b) ಗಾಜು c) ಲೋಹಗಳು d) ಪ್ಲಾಸ್ಟಿಕ್ ಬಾಟಲಿ

## II. ಹೊಂದಿಸಿ ಬರೆಯಿರಿ

| | A | B |
|---|---|---|
| 1) | ಜೀವ ಸಂಕುಲ | - ಜೈವಿಕ ಪರಿಸರ |
| 2) | ಭೌತಿಕ ಸಂಪನ್ಮೂಲಗಳು | - ಅಜೈವಿಕ ಪರಿಸರ |
| 3) | ತ್ಯಾಜ್ಯ ವಸ್ತುಗಳ ವಿಲೇವಾರಿ | - ನಗರಗಳ ಸಮಸ್ಯೆ |
| 4) | ಪರಿಸರ ವಿನಾಶ | - ಪರಿಸರದ ಗುಣಮಟ್ಟ ಕ್ಷೀಣಿಸುವುದು |
| 5) | ಇಕೋಕ್ಲಬ್ | - ಪರಿಸರ ರಕ್ಷಣೆಯ ಸಂಘಟನೆ |
| 6) | ಕ್ಷೇತ್ರ ಸಂಚಾರ | - ಸೋಲಾರ್ ಪ್ಲಾಂಟ್ ವೀಕ್ಷಣೆ |
| 7) | ಪುನರ್ ಚಕ್ರೀಕರಣ | - ನಿರುಪಯುಕ್ತ ವಸ್ತುಗಳ ಸಂಸ್ಕರಣೆ |
| 8) | ಏರ್‌ಕಂಡೀಶನರ್ ಬಳಕೆ | - ಓಝೋನ್ ಪದರದ ವಿನಾಶ |

## III. ಆವರಣದಲ್ಲಿ ಕೊಟ್ಟಿರುವ ಸೂಕ್ತ ಉತ್ತರವನ್ನು ಆರಿಸಿ ಬಿಟ್ಟಸ್ಥಳ ತುಂಬಿರಿ

(ಪರಿಸರ, ರಿಫ್ರಿಜರೇಟರ್, ಪರಿಸರ ವಿನಾಶ, ಕಾರ್ಬನ್ ಡೈ ಆಕ್ಸೈಡ್, ಶಬ್ಧಮಾಲಿನ್ಯ, ಪುನರ್ ಚಕ್ರೀಕರಣ, ಪುನರ್ ಬಳಕೆ, ಕ್ಷೇತ್ರ ಸಂಚಾರ, ಇಕೋಕ್ಲಬ್)

1) ವ್ಯಕ್ತಿಯ ಜೀವನದ ಪ್ರಾರಂಭದಿಂದ ಅವನ ಮೇಲೆ ಪ್ರಭಾವ ಬೀರುವ ಬಾಹ್ಯ ಅಂಶಗಳೆಲ್ಲವೂ____ ಆಗಿದೆ.

2) ಈ ಗೃಹೋಪಯೋಗಿ ಉಪಕರಣದ ಬಳಕೆಯು ಓಝೋನ್ ಪದರದ ವಿನಾಶಕ್ಕೆ ಕಾರಣವಾಗುತ್ತಿದೆ - ______

3) ಮಾನವನ ಚಟುವಟಿಕೆಗಳಿಂದಾಗಿ ನಿಸರ್ಗದ ಗುಣಾತ್ಮಕತೆ ಕ್ಷೀಣಿಸುವುದನ್ನು_____ಎನ್ನುತ್ತೇವೆ.

4) ಪರಿಸರಕ್ಕೆ ಅಪಾಯಕಾರಿಯಾದ ಅನಿಲ________

5) ಅತಿಯಾದ ವಾಹನಗಳ ಬಳಕೆ ಮತ್ತು ಪಟಾಕಿಗಳನ್ನು ಸುಡುವುದರಿಂದ ಪರಿಸರದ ಮೇಲಾಗುವ ಪರಿಣಾಮವೆಂದರೆ___

6) ಗ್ಲಾಸ್, ಪ್ಲಾಸ್ಟಿಕ್, ಹಳೆಯ ಕಬ್ಬಿಣದ ವಸ್ತುಗಳನ್ನು ಪುನಃ ಸಂಸ್ಕರಣೆ ಮಾಡಿ ಬಳಸುವ ಪ್ರಕ್ರಿಯೆಗೆ___ಎನ್ನುತ್ತೇವೆ.

7) ವಸ್ತುಗಳನ್ನು ರಿಪೇರಿ ಮಾಡಿಸುವ, ಹಳೆಯ ವಾಹನಗಳನ್ನು ಖರೀದಿಸಿ ಉಪಯೋಗಿಸುವ ಕ್ರಿಯೆಗೆ_____ಎನ್ನುವರು.

8) ಗೋಬರ್ ಅನಿಲ ಸ್ಥಾವರ, ಜೈವಿಕ ಅನಿಲ ಕೇಂದ್ರಗಳಿಗೆ ಭೇಟಿ ನೀಡಿ ಪರಿಸರ ಸಂರಕ್ಷಣೆಯ ಬಗ್ಗೆ ತಿಳಿಸುವ ವಿಧಾನ___

9) ಪರಿಸರವನ್ನು ಪ್ರೀತಿಸುವ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ರಕ್ಷಿಸಲು ಆಸಕ್ತರಾಗಿರುವ ಜನರ ಸಂಘಟನೆ____

## IV. ಒಂದು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಬೇಕು)

1) ಪರಿಸರವನ್ನು ವ್ಯಾಖ್ಯಾನಿಸಿ.

2) ಪರಿಸರ ಶಿಕ್ಷಣದ ಅರ್ಥವನ್ನು ಬರೆಯಿರಿ.

3) ಪರಿಸರ ವಿನಾಶ ಎಂದರೇನು?

4) ಪರಿಸರ ಸ್ನೇಹಿ ಜೀವನ ಶೈಲಿಯ ಅರ್ಥವೇನು?

5) ಕ್ಷೇತ್ರ ಸಂಚಾರ ಎಂದರೇನು?

6) ಕ್ಷೇತ್ರ ಸಂಚಾರಕ್ಕೆ ಒಂದು ಉದಾಹರಣೆ ಕೊಡಿ.

7) ಪ್ರಕೃತಿ ನಡಿಗೆಯ ಅರ್ಥವೇನು?

8) ಪ್ರಕೃತಿ ಆಟ ಎಂದರೇನು?

9) ಇಕೋ ಕ್ಲಬ್‌ನ ಅರ್ಥವನ್ನು ತಿಳಿಸಿ.

10) ಶಕ್ತಿಯ ಪರ್ಯಾಯ ಮೂಲಗಳಿಗೆ ಒಂದು ಉದಾ. ಕೊಡಿ.

## V. ಎರಡು ಅಂಕದ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2-3 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಪರಿಸರದ ಎರಡು ವಿಧಗಳನ್ನು ಹೆಸರಿಸಿ.

2) ಜೈವಿಕ ಪರಿಸರ ಎಂದರೇನು? ಒಂದು ಉದಾಹರಣೆ ಕೊಡಿ.

3) ಅಜೈವಿಕ ಪರಿಸರ ಎಂದರೇನು? ಒಂದು ಉದಾಹರಣೆ ಕೊಡಿ.

4) ಪರಿಸರದ ಮೇಲೆ ನಗರೀಕರಣದ ಎರಡು ದುಷ್ಪರಿಣಾಮಗಳನ್ನು ತಿಳಿಸಿ.

5) ನೈಸರ್ಗಿಕ ಸಂಪನ್ಮೂಲಗಳ ಯಾವುದೇ ಎರಡು ವಿಧಗಳನ್ನು ಹೆಸರಿಸಿ.

6) ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯ ಎರಡು ಆಯಾಮಗಳನ್ನು ತಿಳಿಸಿ.

7) ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯ ಎರಡು ಮಾರ್ಗಗಳಾವುವು?

8) 4Rಗಳಲ್ಲಿ ಯಾವುದೇ ಎರಡನ್ನು ಹೆಸರಿಸಿ.

9) ಕ್ಷೇತ್ರ ಸಂಚಾರದ ಎರಡು ಪ್ರಾಮುಖ್ಯತೆ ಬರೆಯಿರಿ.

10) ಪ್ರಕೃತಿ ಆಟದಿಂದಾಗುವ ಎರಡು ಪ್ರಯೋಜನಗಳಾವುವು?

11) ಪ್ರಕೃತಿ ನಡಿಗೆಯಿಂದ ಉಂಟಾಗುವ ಎರಡು ಪ್ರಾಮುಖ್ಯತೆ ಬರೆಯಿರಿ.

12) ಇಕೋ ಕ್ಲಬ್‌ನ ಯಾವುದೇ ಎರಡು ಉದ್ದೇಶಗಳನ್ನು ತಿಳಿಸಿ.

## VI. ಹತ್ತು ಅಂಕಗಳ ಪ್ರಶ್ನೆಗಳು (ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 35-40 ವಾಕ್ಯಗಳಲ್ಲಿ ಉತ್ತರಿಸಬೇಕು)

1) ಪರಿಸರದ ಮಹತ್ವವನ್ನು ವಿವರಿಸಿ.

2) ಪರಿಸರದ ವಿಧಗಳನ್ನು ವಿವರಿಸಿ.

3) ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ 4 Rಗಳ ಪಾತ್ರವನ್ನು ಉದಾಹರಣೆಯೊಂದಿಗೆ ವಿವರಿಸಿ.

4) ಮಾನವನು ತನ್ನ ಜೀವನದಲ್ಲಿ 'ಪರಿಸರ ಸ್ನೇಹಿ ಜೀವನ ಶೈಲಿ'ಯನ್ನು ಹೇಗೆ ಅನುಸರಿಸಬಹುದು?

5) ಪರಿಸರ ಶಿಕ್ಷಣದಲ್ಲಿ ಕ್ಷೇತ್ರ ಸಂಚಾರ, ಪ್ರಕೃತಿ ನಡಿಗೆ ಮತ್ತು ಪ್ರಕೃತಿ ಆಟಗಳ ಪ್ರಾಮುಖ್ಯತೆ ವಿವರಿಸಿ.

6) ಪರಿಸರ ಕೂಟದ ಉದ್ದೇಶಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ವಿವರಿಸಿ.

7) ಪರಿಸರ ವಿನಾಶಕ್ಕೆ ಕಾರಣವಾಗುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.